ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಮಂಗಳವಾರ, ಮೇ 07, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 356 RNI : 27369/75

50 1974 2023

janathavani@mac.com
www.janathavani.com
08192 254736 91642 99999






# ಶಾಂತಿಯುತ ಲೋಕಸಭಾ ಚುನಾವಣೆಗೆ ತಾಲ್ಲೂಕು ಆಡಳಿತ ಸಜ್ಜು

ಜಗಳೂರು

ಜಗಳೂರು, ಮೇ 6- ಮತಗಟ್ಟೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸರ್ಕಾರಿ ಬಸ್ ಗಳ ಮೂಲಕ ತಮ್ಮನ್ನು ನಿಯೋಜಿಸಿರುವ ಮತಗಟ್ಟೆಗಳಿಗೆ ಮತ ಯಂತ್ರಗಳೊಂದಿಗೆ ತೆರಳಿದರು.

ಜಗಳೂರು ವಿಧಾನಸಭಾ ಕ್ಷೇತ್ರದಲ್ಲಿ 263 ಮತಗಟ್ಟೆಗಳಿಗೆ ಬೇಕಾದ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿದೆ. ಇದರಲ್ಲಿ 5 ಸಖಿ ಮತಗಟ್ಟೆಗಳು, 1 ವಿಶೇಷ ಚೇತನರ ನಿರ್ವಹಣೆ ಮತಗಟ್ಟೆ, 1 ಧ್ಯೇಯ ಆಧಾರಿತ ಮತಗಟ್ಟೆ, 1 ಯುವಜನ ನಿರ್ವಹಣೆ ಮತಗಟ್ಟೆ, 1 ಸಾಂಪ್ರದಾಯಿಕ ಮತ ಗಟ್ಟೆಗಳನ್ನು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ಅಧಿಕಾರಿಗಳ ಸಹಕಾರದೊಂದಿಗೆ ಮತಗಟ್ಟೆಯ ಕಟ್ಟಡಗಳಲ್ಲಿ, ತಂಗುವ ಸಿಬ್ಬಂದಿಗಳಿಗೆ ಅಗತ್ಯ ಕುಡಿಯುವ ನೀರು ಶೌಚಾಲಯ, ಊಟದ ವ್ಯವಸ್ಥೆ ರ್‍ಯಾಕ್ ಸೌಲಭ್ಯಗಳನ್ನು ಕೈಗೊಂಡಿದೆ.



ಸಹಾಯಕ ಚುನಾವಣಾಧಿಕಾರಿ ಶಿದ್ರಾಮ ವೈ ಮಾರಿಹಾಳ, ವೆಚ್ಚ ವೀಕ್ಷಕರಾಗಿ ಪ್ರತಿಭಾ ಸಿಂಗ್ (IRS ಅಧಿಕಾರಿ), ಸಾಮಾನ್ಯ ವೀಕ್ಷಕರಾಗಿ ಲಕ್ಷ್ಮಿದೇವಿ (ಹಿರಿಯ IAS ಅಧಿಕಾರಿ) ಇವರ ಮೂಲಕ ಮತಗಟ್ಟೆಗಳ ಪರಿಶೀಲನೆ ನಡೆಸಿದರು.

ಜಗಳೂರು ವಿಧಾನಸಭಾ ಕ್ಷೇತ್ರದಲ್ಲಿ 263 ಮತಗಟ್ಟೆಗಳಿದ್ದು, 1 ಅತಿ ಸೂಕ್ಷ್ಮ ಮತಗಟ್ಟೆ, 49 ಸೂಕ್ಷ್ಮ ಮತಗಟ್ಟೆ, 214 ಸಾಮಾನ್ಯ ಮತಗಟ್ಟೆಗಳೆಂದು ಗುರುತಿಸಲಾಗಿದೆ. 157 ಮತಗಟ್ಟೆಗಳಲ್ಲಿ ವೆಬ್ ಕಾಸ್ಟಿಂಗ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ.

ಜಗಳೂರು ವಿಧಾನಸಭಾ ಕ್ಷೇತ್ರದಲ್ಲಿ 1,00,046 ಪುರುಷ ಮತ್ತು ಮಹಿಳೆಯರು - 98,759 ಒಟ್ಟು 1,98,815 ಮತದಾರರಿದ್ದಾರೆ 10 ಮಂದಿ ತೃತೀಯ ಲಿಂಗಿಗಳಿದ್ದಾರೆ .

ಲೋಕಸಭಾ ಚುನಾವಣಾ ಸಂಬಂಧ 31 ಮುಂದಿ ಸೆಕ್ಟರ್ ಅಧಿಕಾರಿಗಳು, ಎಸ್ಎಸ್‌ಟಿ 5, ಎಫ್.ಎಸ್.ಟಿ 3, ವಿ.ವಿ.ಟಿ 1 ವಿ, ಎಸ್.ಟಿ 2, ಎ.ಎಲ್.ಎಂ.ಟಿ.ಎಸ್ 2 ಮಂದಿ ಅಧಿಕಾರಿಗಳನ್ನು ನೇಮಿಸಲಾಗಿದೆ.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜು ಕಟ್ಟಡದಲ್ಲಿ ತಾತ್ಕಾಲಿಕವಾಗಿ ಭದ್ರತಾ ಕೊಠಡಿ ಗಳನ್ನು ಗುರುತಿಸಲಾಗಿದ್ದು, ಅಲ್ಲಿ ಮತಯಂತ್ರ ಗಳನ್ನು ವಿ.ವಿ.ಎಂ. ಮಿಷನ್‌ಗಳನ್ನು ಭದ್ರವಾಗಿ ಇಡಲಾಗಿತ್ತು. ಚುನಾವಣೆ ನಡೆಯುವ ಪ್ರಕ್ರಿಯೆಗಳನ್ನು 1232 ಚುನಾವಣಾ ಸಿಬ್ಬಂದಿಗಳು, ಪಿ.ಆರ್.ಓ - 308, ಎಪಿಆರ್ ಓ-308 , ಪಿ ಓ-616 ಚುನಾವಣಾ ಸಿಬ್ಬಂದಿಗಳು ಇಂದು ನಿಗದಿತ ಮತ ಗಟ್ಟೆಗಳಿಗೆ ಮತಯಂತ್ರಗಳೊಂದಿಗೆ ತೆರಳಿದರು. ಮರುದಿನ ನಾಳೆ ಬೆಳಿಗ್ಗೆ 7 ಗಂಟೆ ಯಿಂದ ಸಂಜೆ 6 ವರೆಗೆ ಮತದಾನ ನಡೆಯಲಿದೆ.

## ನಡ್ಡಾ, ಮಾಳವೀಯ, ವಿಜಯೇಂದ್ರ ವಿರುದ್ಧ ಎಫ್.ಐ.ಆರ್.

ಬೆಂಗಳೂರು, ಮೇ 6 – ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನರು ನಿರ್ದಿಷ್ಟ ಅಭ್ಯರ್ಥಿಗೆ ಮತ ಚಲಾಯಿಸದಂತೆ ಬೆದರಿಕೆ ಹಾಕಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ, ಪಕ್ಷದ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಹಾಗೂ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಚುನಾವಣಾ ಆಯೋಗ ಹಾಗೂ ಪೊಲೀಸರ ಬಳಿ ದೂರು ದಾಖಲಿಸಿ, ನೀತಿ ಸಂಹಿತೆ ಉಲ್ಲಂಘನೆಯಾಗಿದೆ ಎಂದು ತಿಳಿಸಿತ್ತು.

ಈ ಹಿನ್ನೆಲೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ. ರಾಜ್ಯ ಬಿಜೆಪಿಯ ಟ್ವಿಟ್ಟರ್ ಖಾತೆಯಲ್ಲಿ ಆಕ್ಷೇಪಾರ್ಹ ವಿಡಿಯೋ ಅನ್ನು ಮೇ 4ರಂದು ಪ್ರಕಟಿಸಲಾಗಿದೆ. ಇದರಲ್ಲಿ ಎಸ್.ಸಿ, ಎಸ್.ಟಿ. ಹಾಗೂ ಒ.ಬಿ.ಸಿ. ಸಮುದಾಯಗಳ ಮೀಸಲಾತಿಗೆ ಸಂಬಂಧಿಸಿದಂತೆ ಆಕ್ಷೇಪಾರ್ಹ ಹೇಳಿಕೆ ನೀಡಲಾಗಿದೆ. ಮುಸ್ಲಿಂ ಸಮುದಾಯವದರು ಇವರ ಮೀಸಲಾತಿ ಕಸಿಯುತ್ತಿದ್ದಾರೆ ಎಂದು ಆರೋಪಿಸಲಾಗಿದೆ ಎಂದು ದೂರಿನಲ್ಲಿ ಹೇಳಲಾಗಿತ್ತು.

## ಹರಿಹರ : ವಿಳಂಬ ಕಾಮಗಾರಿಯಿಂದ ಸ್ಥಳೀಯ ನಿವಾಸಿಗಳಿಗೆ ತೊಂದರೆ



ಹರಿಹರ, ಮೇ 6- ನಗರದ ದೊಡ್ಡಿ ಬೀದಿ ಬಡಾವಣೆಯಲ್ಲಿ ಚರಂಡಿ ಕಾಮಗಾರಿ ನಡೆಯುತ್ತಿದ್ದು, ಗುತ್ತಿಗೆದಾರ ಸಕಾಲಕ್ಕೆ ಕಾಮಗಾರಿ ಪೂರ್ಣಗೊಳಿ ಸದೇ ಇರುವುದರಿಂದ ಬಡಾವಣೆ ನಿವಾಸಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಈ ಬಡಾವಣೆಯಲ್ಲಿ ಓಡಾಡುವ ಜನರು, ರಸ್ತೆಯ ವಿಕಾರತೆ ಗಮನಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ. ವಿಳಂಬ ಕಾಮಗಾರಿಯಿಂದ ಸ್ಥಳೀಯರಿಗೆ ತೊಂದರೆ ಆಗುತ್ತಿದೆ ಎಂದು ನಿವಾಸಿ ಎಂ.ಎಚ್.ಬಿ. ಚಂದ್ರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಸಮಸ್ಯೆ ಕುರಿತು ಗುತ್ತಿಗೆದಾರ ಸದ್ದಾಂ ಮತ್ತು ನಗರಸಭೆ ಎಇಇ ತಿಪ್ಪೇಸ್ವಾಮಿ ಅವರಿಗೆ ತಿಳಿಸಿದರೆ ಉದ್ಧಟತನದ ಮಾತುಗಳಿಂದ ನಿರ್ಲಕ್ಷ್ಯ ತೋರುತ್ತಿದ್ದಾರೆ.

ಸಂಬಂಧಿಸಿದ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ. ಕಾಮಗಾರಿ ಪರಿಶೀಲಿಸಿ ಪೂರ್ಣಗೊಳಿಸುವ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

## ಮತದಾನ ಮಾಡಿ ಬಹುಮಾನ ಗೆಲ್ಲಿ

ದಾವಣಗೆರೆ, ಮೇ 6- ನಗರದ 42ನೇ ವಾರ್ಡಿನ ಮತದಾರರು, ಮತ ಚಲಾಯಿಸಿ ಆಕರ್ಷಕ ಬಹುಮಾನ ಗೆಲ್ಲುವ ಅವಕಾಶವನ್ನು ನಗರದ ವಿಶ್ವ ಪೇಪರ್ ಸ್ಟಾಲ್ ಕಲ್ಪಿಸಿದೆ. ನಾಳೆ ದಿನಾಂಕ 7ರ ಇಂದು ಬೆಳಗ್ಗೆ 7ರಿಂದ ಸಂಜೆ 6ರೊಳಗೆ ಮತ ಚಲಾಯಿಸಿ ಶಾಹಿ ಹಚ್ಚಿದ ತೋರು ಬೆರಳು ಪೂರ್ಣವಾಗಿ ಕಾಣುವಂತೆ ಸೆಲ್ಫಿ, ಮೊಬೈಲ್ ಸಂಖ್ಯೆ, ವೋಟರ್ ಐಡಿ ಮತ್ತು ಎಪಿಕ್ ಸಂಖ್ಯೆಯೊಂದಿಗೆ 9036315175 ವ್ಯಾಟ್ಸ್ಯಾಪ್ ಮಾಡಲು ಪ್ರಕಟಣೆ ತಿಳಿಸಿದೆ.

ಪ್ರಥಮ ಬಹುಮಾನವಾಗಿ (ಆಂಡ್ರಾಯ್ಡ್ ಮೊಬೈಲ್), ದ್ವಿತೀಯ (ಸಿರಿಧಾನ್ಯ ಪಂಚರತ್ನ ಕಿಟ್ 10 ಜನರಿಗೆ), ತೃತೀಯ (ಕಥಾ-ಕವನ-ವಚನಗಳ ಪುಸ್ತಕಗಳು 10 ಜನ) ಪಡೆಯಬಹುದು.

## ಪ್ರಜ್ಞಾವಂತ ಮತದಾರ ಪ್ರಜಾಪ್ರಭುತ್ವದ ಯಶಸ್ಸಿನ ರೂವಾರಿ : ಬಿ. ವಾಮದೇವಪ್ಪ



ದಾವಣಗೆರೆ, ಮೇ 6- ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ರಾಷ್ಟ್ರ ಭಾರತ. ಇಲ್ಲಿ ಪ್ರತಿ 5 ವರ್ಷಕ್ಕೊಮ್ಮೆ ನಡೆಯುವ ಚುನಾವಣೆಯಲ್ಲಿ ಮತದಾರ ತನ್ನ ಅಮೂಲ್ಯ ಮತ ಚಲಾವಣೆ ಮೂಲಕ ಪ್ರಜಾಪ್ರಭುತ್ವಕ್ಕೆ ಶಕ್ತಿಯನ್ನು ತುಂಬುತ್ತಾನೆ. ಹಾಗಾಗಿ ಪ್ರತಿಯೊಬ್ಬ ಮತದಾರನೂ ತಪ್ಪದೇ ಮತದಾನ ಮಾಡಬೇಕು. ಇದು ಮತದಾನ ಜಾಗೃತಿ ಅಭಿಯಾನದ ಉದ್ದೇಶ ಕೂಡಾ ಆಗಿದೆ. ಪ್ರಜ್ಞಾವಂತ ಮತದಾರರಿಂದ ಪ್ರಜಾಪ್ರಭುತ್ವದ ಯಶಸ್ಸು ಸಾಧ್ಯ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಿ. ವಾಮದೇವಪ್ಪ ಅವರು ತಿಳಿಸಿದರು.

ಜಿಲ್ಲಾ ಮತ್ತು ತಾಲ್ಲೂಕು ಕಸಾಪ., ತಾ.ಪಂ., ಗ್ರಾ.ಪಂ. ಎಲೇಬೇತೂರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶ್ರೀ ವಂದೇ ಮಾತರಂ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ಎಲೇಬೇತೂರು ಹಾಗೂ ಆರೋಗ್ಯ ಇಲಾಖೆ ಎಲೇಬೇತೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಎಲೇಬೇತೂರಿನ ಗ್ರಾಮ ಪಂಚಾಯಿತಿ ಆವರಣದಲ್ಲಿ ಏರ್ಪಡಿಸಿದ್ದ ದತ್ತಿ ಉಪನ್ಯಾಸ ಹಾಗೂ ಮತದಾನ ಜಾಗೃತಿ ಅಭಿಯಾನದ ಅಂಗವಾಗಿ ಏರ್ಪಡಿಸಿದ್ದ ರಂಗೋಲಿ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದಾವಣಗೆರೆ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ರಾಮಭೋವಿ ಬಿಳಿ ಪರದೆಯ ಮೇಲೆ ನನ್ನ ದೇಶ ನನ್ನ ಮತ ಎಂದು ಒಕ್ಕಣೆ ಬರೆಯುವುದರ ಮೂಲಕ ರಂಗೋಲಿ ಸ್ಪರ್ಧೆ ಮತ್ತು ಕೈಗೆ ಮೆಹಂದಿ ಹಾಕುವುದರ ಮೂಲಕ ಮತದಾನ ಜಾಗೃತಿಗೆ ಚಾಲನೆ ನೀಡಿದರು. ನಂತರ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಡಾ. ರುದ್ರಮುನಿ ಹಿರೇಮಠ್ ಮತದಾನ ಜಾಗೃತಿ ಕುರಿತಾಗಿ ಉಪನ್ಯಾಸ ನೀಡಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಯನ್ನಾಡಿದರು. ಪಿಡಿಓ ಶ್ರೀಮತಿ ಎ. ಅಂಬಿಕಾ ಅವರು ರಂಗೋಲಿ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿದರು.

ವೇದಿಕೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕರಾದ ಶ್ರೀಮತಿ ಗಂಗವ್ವ ಅಜ್ಜಪ್ಪ, ಬೇತೂರಿನ ಸಮುದಾಯ ಆರೋಗ್ಯ ಅಧಿಕಾರಿ ಶ್ರೀಮತಿ ಗುಣಶೀಲ, ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಜಗದೀಶ್ ಕೂಲಂಬಿ, ತಾಲ್ಲೂಕು ಕಸಾಪ ನಿರ್ದೇಶಕ ಷಡಾಕ್ಷರಪ್ಪ ಎಂ.ಬೇತೂರು, ಶಿವಕುಮಾರ್ ಆರ್. ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸೌಮ್ಯ ಮಠದ್ ಉಪಸ್ಥಿತರಿದ್ದರು.

ಆಶಾ ಪ್ರಾರ್ಥಿಸಿದರು. ಷಡಾಕ್ಷರಪ್ಪ ಎಂ. ಬೇತೂರು ಸ್ವಾಗತಿಸಿದರು. ದಾಗಿನಕಟ್ಟೆ ಪರಮೇಶ್ವರಪ್ಪ ನಿರೂಪಿಸಿದರು.

## ಬಸವ ಜಯಂತಿ : ವಚನಾಮೃತ ಬಳಗದಿಂದ ಆರೋಗ್ಯ ತಪಾಸಣೆ



ದಾವಣಗೆರೆ, ಮೇ 6- ನಗರದ ವಚನಾಮೃತ ಬಳಗ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಾಗೂ ನಾರಾಯಣ ಹೃದಯಾಲಯ ಇವರುಗಳ ಸಂಯುಕ್ತಾಶ್ರಯದಲ್ಲಿ ಬಸವ ಜಯಂತಿ ಪ್ರಯುಕ್ತ ಆರೋಗ್ಯ ತಪಾಸಣೆ ಹಾಗೂ ದತ್ತಿ ಅನುಭಾವವನ್ನು ಎಸ್. ಎಸ್. ಲೇಔಟ್‌ನ ಸುಪ್ರೀತ್ ಹಾಲ್‌ನಲ್ಲಿ ಈಚೆಗೆ ಹಮ್ಮಿಕೊಳ್ಳಲಾಗಿತ್ತು.

ವಚನಾಮೃತ ಬಳಗದ ಅಧ್ಯಕ್ಷರಾದ ಸೌಮ್ಯ ಸತೀಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಶಾಂತರಾಜ್ ದಾನಿಗಳ ಪರವಾಗಿ ಆಗಮಿಸಿ ವಚನಗಳನ್ನು ಕಲಿತು ಹಾಡಿ ಅನುಸರಿಸಿದರೆ ಶಾರೀರಿಕ ಹಾಗೂ ಮಾನಸಿಕ ಆರೋಗ್ಯ ಚೆನ್ನಾಗಿ ಇರುತ್ತದೆ ಎಂದು ಹೇಳಿದರು.

ನಾರಾಯಣ ಹೃದಯಾಲಯದ ಡಾ. ಗುರುರಾಜ್ ಆರೋಗ್ಯ ತಪಾಸಣೆ ಹಾಗೂ ಕ್ಯಾಂಪಿನ ಮುಂದಾಳತ್ವ ವಹಿಸಿ, ಆರೋಗ್ಯವೇ ಭಾಗ್ಯ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಬಿ. ಪರಮೇಶರಪ್ಪ ದತ್ತಿ ಹಾಗೂ ಶರಣ ಸಂಸ್ಕೃತಿ ಹಾಗೂ ವಚನ ಸಾಹಿತ್ಯ ಪ್ರಚಾರದ ಬಗ್ಗೆ ಮಾತನಾಡಿದರು.

ಸುಜಾತ ಬಸವರಾಜ್ ಹಾಗೂ ವಚನಾಮೃತ ಬಳಗದ ಗೆಳತಿಯರು ವಚನ ಪ್ರಾರ್ಥನೆ ನಡೆಸಿಕೊಟ್ಟರು. ಸೌಮ್ಯ ಸತೀಶ್ ಸ್ವಾಗತಿಸಿದರು. ದೀಪ ಕಿರಣ್ ವಂದಿಸಿದರು. ಶ್ರೀಮತಿ ಮಮತಾ ನಾಗರಾಜ್ ನಿರೂಪಿಸಿದರು.

## ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಳೆ ಅಕ್ಷಯ ಅಮಾವಾಸ್ಯೆ



ದಾವಣಗೆರೆ, ಮೇ 6 - ನಗರದ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ, ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಗುರು ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಅಕ್ಷಯ ತದಿಗೆ ಅಮಾವಾಸ್ಯೆ ಪ್ರಯುಕ್ತ ನಾಡಿದ್ದು ದಿನಾಂಕ 8ರ ಬುಧವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ, ವಿಶೇಷ ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ.

ಶಿವಕ್ಕಳ ಕೊಟ್ರೇಶ್ ಶಾಮನೂರು ಕುಟುಂಬದವರು ಪ್ರಸಾದದ ಸೇವಾಕರ್ತರಾಗಿದ್ದಾರೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 888898) ಬಿ.ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರು ಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

## ಗಂಗನರಸಿಯಲ್ಲಿ ನಾಳೆ ಅಮಾವಾಸ್ಯೆ

ಹರಿಹರ, ಮೇ 6 - ತಾಲ್ಲೂಕಿನ ಗಂಗನರಸಿ ಗ್ರಾಮದ ಶ್ರೀ ಗೋಣಿ ಬಸವೇಶ್ವರ ಹೊರ ಮಠದಲ್ಲಿ ಅಕ್ಷಯ ತದಿಗೆ ಅಮಾವಾಸ್ಯೆಯ ವಿಶೇಷ ಪೂಜಾ ಕಾರ್ಯಕ್ರಮಗಳು ನಾಡಿದ್ದು 8ರ ಬುಧವಾರ ಬೆಳಿಗ್ಗೆ 11ಕ್ಕೆ ನಡೆಯಲಿವೆ.

ಬೆಳಿಗ್ಗೆ 11 ಗಂಟೆಗೆ ಶ್ರೀ ಗೋಣಿ ಬಸವೇಶ್ವರ ಹಾಗೂ ನಾಗದೇವತಾ ಸ್ವಾಮಿಗಳಿಗೆ ಅಮಾವಾಸ್ಯೆಯ ವಿಶೇಷ ಪೂಜೆ, ಅಭಿಷೇಕ, ಮಹಾಮಂಗಳಾರತಿ ನಡೆಯುವುದು. ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆ ಜರುಗುವುದು.

ಚಂದ್ರಪ್ಪ ಸೇತ್ ಸನದಿ ಶ್ರೀಮತಿ ಕಮಲಮ್ಮ ಪ್ರಸಾದದ ವ್ಯವಸ್ಥೆ ಏರ್ಪಡಿಸಿದ್ದಾರೆ. ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ ಹಾಗೂ ಶ್ರೀ ಹನುಮಂತದೇವರ ಜೀರ್ಣೋದ್ಧಾರ ಸಮಿತಿ ಆಶ್ರಯದಲ್ಲಿ ಕಾರ್ಯಕ್ರಮಗಳು ನಡೆಯಲಿವೆ ಎಂದು ಅಧ್ಯಕ್ಷ ಜಿ.ಎಂ. ನಾಗೇಂದ್ರಪ್ಪ, ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ 110ನೇ ಸಂಸ್ಥಾಪನಾ ದಿನಾಚರಣೆ



ದಾವಣಗೆರೆ, ಮೇ 6- ನಗರದ ಕನ್ನಡ ಕುವೆಂಪು ಭವನದಲ್ಲಿ ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕನ್ನಡ ಸಾಹಿತ್ಯ ಪರಿಷತ್ತಿನ 110ನೆಯ ಸಂಸ್ಥಾಪನೆ ದಿನಾಚರಣೆ ಆಚರಿಸಲಾಯಿತು.

ಈ ಸಂದರ್ಭದಲ್ಲಿ ತಾಯಿ ಕನ್ನಡ ಭುವನೇಶ್ವರಿಗೆ ಪೂಜೆ ಸಲ್ಲಿಸಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿಗೆ 1915 ಮೇ 5 ರಂದು ಸ್ಥಾಪನೆ ಮಾಡಿದ ಅಂದಿನ ಮೈಸೂರು ಮಹಾ ರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಭಿವೃದ್ಧಿಗೆ ಸಹಕರಿಸಿದ ಸರ್.ಎಂ. ವಿಶ್ವೇಶ್ವರಯ್ಯ ಹಾಗೂ ಸರ್ ಮಿರ್ಜಾ ಇಸ್ಮಾಯಿಲ್ ಅವರಿಗೆ ಪುಷ್ಪ ನಮನ ಸಲ್ಲಿಸಲಾಯಿತು.

ತಾಲ್ಲೂಕು ಕಸಾಪ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ಗೌರವ ಕಾರ್ಯದರ್ಶಿಗಳಾದ ದಾಗಿನಕಟ್ಟಿ ಪರಮೇಶಪ್ಪ, ನಾಗರಾಜ್ ಸಿರಿಗೆರೆ ನಿರ್ದೇಶಕರಾದ ಷಡಕ್ಷರಪ್ಪ ಎಂ. ಬೇತೂರು, ಆರ್. ಶಿವಕುಮಾರ್ ಹಾಗೂ ಇತರೆ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗಿಲ್ಲ

ನವದೆಹಲಿ, ಮೇ 6 – ವೈದ್ಯಕೀಯ ಪ್ರವೇಶಕ್ಕಾಗಿ ನಡೆಸಲಾದ ನೀಟ್ - ಯುಜಿ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿವೆ ಎಂಬ ಆರೋಪ ಆಧಾರ ರಹಿತ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯಾದ ಎನ್.ಟಿ.ಎ. ತಿಳಿಸಿದೆ.

ಪ್ರತಿಯೊಂದು ಪ್ರಶ್ನೆ ಪತ್ರಿಕೆಗೂ ಲೆಕ್ಕ ಇದೆ. ಸೋರಿಕೆಯಾಗಿದೆ ಎಂದು ಹೇಳಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಡಲಾಗಿರುವ ಪ್ರಶ್ನೆ ಪತ್ರಿಕೆಗಳಿಗೂ, ನಿಜವಾದ ಪ್ರಶ್ನೆ ಪತ್ರಿಕೆಗೂ ಸಂಬಂಧವಿಲ್ಲ ಎಂದು ಎನ್.ಟಿ.ಎ. ತಿಳಿಸಿದೆ.

ಪರೀಕ್ಷೆ ಆರಂಭವಾದ ನಂತರ ಯಾವುದೇ ಹೊರಗಿನ ವ್ಯಕ್ತಿ ಇಲ್ಲವೇ ಸಂಸ್ಥೆಗೆ ಪರೀಕ್ಷಾ ಕೇಂದ್ರಗಳಲ್ಲಿ ಪ್ರವೇಶ ಇರುವುದಿಲ್ಲ ಎಂದು ಎನ್.ಟಿ.ಎ. ಹಿರಿಯ ನಿರ್ದೇಶಕಿ ಸಾಧನಾ ಪರಾಶರ್ ಹೇಳಿದ್ದಾರೆ.


## ಪ್ರಥಮ ಪುಣ್ಯಸ್ಮರಣೆ



**ಶ್ರೀಮತಿ ಲಲಿತಮ್ಮ**

(ದಿ ದಾವಣಗೆರೆ - ಹರಿಹರ ಅರ್ಬನ್ ಬ್ಯಾಂಕಿನ ಸಂಸ್ಥಾಪಕರೂ, ಸಹಕಾರಿ ಧುರೀಣರೂ, 'ಸಹಕಾರ ರತ್ನ' ಪುರಸ್ಕೃತರು ಆಗಿದ್ದ ಲಿಂ॥ ಎಸ್.ಎಂ.ಜೆ.ಬಿ. ಆರಾಧ್ಯ ಇವರ ಧರ್ಮಪತ್ನಿ)

ನೀವು ನಮ್ಮನ್ನಗಲಿ ಇಂದಿಗೆ (ದಿ. 07.05.2024ಕ್ಕೆ) ಒಂದು ವರ್ಷ ಕಳೆದರೂ,
ನಿಮ್ಮ ಪ್ರೀತಿ ಮತ್ತು ಆದರ್ಶಗಳೇ ಮರೆಯಾಗುತ್ತಿಲ್ಲ.
ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ,
ನಿಮ್ಮ ನೆನಪಿನಲ್ಲಿರುವ

ದುಃಖತಪ್ತ ಕುಟುಂಬ ವರ್ಗ

ತಮ್ಮಂದಿರು, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು.

## ಒಂಭತ್ತನೇ ವರ್ಷದ ಪುಣ್ಯಸ್ಮರಣೆ



ಜನನ : 01.07.1949 ಮರಣ : 07.05.2015

*ಉಸಿರು ಹೋದರೂ ಹೆಸರು ಉಳಿಸಿದ*

**ಶ್ರೀ ಪಿ. ರಾಮನಗೌಡ್ರು**

ಹಿರಿಯ ವಕೀಲರು ಹಾಗೂ ಅಧ್ಯಕ್ಷರು, ಡಿಡಿಸಿಸಿ ಬ್ಯಾಂಕ್, (2013-2015) ದಾವಣಗೆರೆ ಜಿಲ್ಲೆ.

*ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು.
ನಿಮ್ಮ ಸವಿ ನೆನಪು ನಮ್ಮ ಮನದಂಗಳದಲ್ಲಿ
ಸದಾ ಹಚ್ಚ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು
ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ*

- ಪತ್ನಿ : ಶ್ರೀಮತಿ ಪಿ. ಕೊಟ್ರಮ್ಮ ರಾಮನಗೌಡ್ರು
ಶ್ರೀಮತಿ ಮಮತಾ, ಶ್ರೀ ಜಿ.ಎಸ್. ಸುರೇಶ್
ಶ್ರೀಮತಿ ಆಶಾ, ಶ್ರೀ ಪಿ. ಪ್ರೇಮ್‌ಕುಮಾರ್
ಶ್ರೀ ಪಿ. ವೀರನಗೌಡ
- ಮೊಮ್ಮಕ್ಕಳು : ಜಿ.ಎಸ್. ವರ್ಷಿಣಿ, ಜಿ.ಎಸ್. ವೈಷ್ಣವಿ, ಪಿ. ರಾಹುಲ್‌ಗೌಡ, ಪಿ. ಹಿಮಾ ಹಾಗೂ ಚಿಗಟೇರಿ ಪರಶುರಾಮಪ್ಪನವರ ವಂಶಸ್ಥರು ಹಾಗೂ ಬಂಧು-ಮಿತ್ರರು.


## ಬಯಲುಸೀಮೆ ಅಭಿವೃದ್ಧಿ ಮಂಡಳಿ ಕಾರ್ಯದರ್ಶಿ ಲೋಕಾಯುಕ್ತ ಬಲೆಗೆ



ಚಿತ್ರದುರ್ಗ, ಮೇ 6 - ಅಭಿವೃದ್ಧಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಗುತ್ತಿಗೆದಾರರೊಬ್ಬರಿಂದ 4 ಲಕ್ಷ ರೂ. ಲಂಚ ಪಡೆಯುವಾಗ ಬಯಲುಸೀಮೆ ಅಭಿವೃದ್ಧಿ ಮಂಡಳಿ ಕಾರ್ಯದರ್ಶಿ ಎಸ್.ವೈ.ಬಸವರಾಜಪ್ಪ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಗುತ್ತಿಗೆದಾರ ವೈ.ಪಿ.ಸಿದ್ದನಗೌಡ ಎಂಬುವರು 15 ತುಂಡು ಕಾಮಗಾರಿಗಳ ಟೆಂಡರ್ ಪಡೆದಿದ್ದರು. ಅಗತ್ಯ ಅನುದಾನಕ್ಕೆ ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಆಡಳಿತಾತ್ಮಕ ಅನುಮೋದನೆ ಪಡೆ ಯಲು ಅವರು ಪ್ರಯತ್ನ ನಡೆಸಿದ್ದರು. ಈ ಸಂಬಂಧ ಬಸವರಾಜಪ್ಪ ಲಂಚ ಪಡೆಯುವಾಗ ಕ್ರಮ ತೆಗೆದುಕೊಳ್ಳಲಾಗಿದೆ.

## ಆವರಗೆರೆಯಲ್ಲಿ ಎಐವೈಎಫ್ ಸಂಸ್ಥಾಪನಾ ದಿನಾಚರಣೆ



ದಾವಣಗೆರೆ, ಮೇ 6 - ಅಖಿಲ ಭಾರತ ಯುವಜನ ಒಕ್ಕೂಟವು ನಗರದ ಹೊರ ವಲಯದ ಆವರಗೆರೆಯಲ್ಲಿ 65ನೇ ವರ್ಷದ ಸಂಸ್ಥಾಪನಾ ದಿನ ಆಚರಿಸಿತು. ಈ ವೇಳೆ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು ಒಕ್ಕೂಟ ಸಾಧನೆ ಕುರಿತು ಮಾತನಾಡಿದರು. ಜಿಲ್ಲಾಧ್ಯಕ್ಷ ಕೆರನಹಳ್ಳಿ ರಾಜು, ಕಾರ್ಯದರ್ಶಿ ಎ. ತಿಪ್ಪೇಶ್, ಎನ್.ಟಿ ತಿಪ್ಪೇಸ್ವಾಮಿ, ಅಣ್ಣಪ್ಪ, ಗುರುಮೂರ್ತಿ, ಮಂಜುನಾಥ್, ಮಂಜು, ದುಗ್ಗೇಶ್, ನಾಗೇಂದ್ರ, ಪಿ. ಎಲ್. ಸುನೀಲ್, ಭೀಮಜ್ಜ, ಸಂತೋಷ್, ಮಲ್ಲಿಕಾರ್ಜುನ್, ಶಿವು, ಮಹೇಶ್, ಕರಿಯಪ್ಪ, ಆನಂದ್, ಕೃಷ್ಣಮೂರ್ತಿ ಮತ್ತು ಇತರರಿದ್ದರು.

## ಕಾಂಗ್ರೆಸ್ ಮುಖಂಡ ಕೆ.ಸಿ. ರಹಮತ್‌ವುಲ್ಲಾ ನಿಧನ



ದಾವಣಗೆರೆ, ಮೇ 6 - ನಗರದ ಕಾಂಗ್ರೆಸ್ ಹಿರಿಯ ಮುಖಂಡ ಕೆ.ಸಿ. ರಹಮತ್‌ವುಲ್ಲಾ (70) ಅವರು ಇಂದು ಮಧ್ಯಾಹ್ನ 1ಕ್ಕೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಪಿ.ಬಿ.ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ಇಂದು ಸಂಜೆ ನೆರವೇರಿತು.

**ಸೋಮಲಾಪುರ ಸಂತಾಪ :** ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಮಾಜಿ ಉಪಾಧ್ಯಕ್ಷ ಕೆ.ಸಿ. ರಹಮತ್‌ಉಲ್ಲಾ ಅವರ ನಿಧನಕ್ಕೆ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕೆ.ಪಿ.ಸಿ.ಸಿ. ಎಸ್ಸಿ ವಿಭಾಗದ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಸಂಘಟನೆಯಲ್ಲಿ ತಮ್ಮ ಜೀವನದುದ್ದಕ್ಕೂ ಶ್ರಮಿಸಿದ್ದಾರೆ. ದಿ. ಇಂದಿರಾಗಾಂಧಿ ಹಾಗೂ ದೇವರಾಜ ಅರಸು ಅವರೂ ಸೇರಿದಂತೆ, ರಾಜ್ಯದ ಹಿರಿಯ ಕಾಂಗ್ರೆಸ್ ಮುಖಂಡರ ಸಂಪರ್ಕ ಹೊಂದಿದ್ದ ರಹಮತ್‌ವುಲ್ಲಾ ನಿಧನದಿಂದ ಕಾಂಗ್ರೆಸ್ ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಹನುಮಂತಪ್ಪ ಕಂಬನಿ ಮಿಡಿದಿದ್ದಾರೆ.

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

50 1974 2023

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಮಂಗಳವಾರ, ಮೇ 07, 2024 ☎ 08192 254736 91642 99999





ಹೊಂಡದ ರಸ್ತೆ, ಜಾಲಿನಗರದ ಜನತಾ ವಿದ್ಯಾಲಯ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನಲ್ಲಿ ಸಾಂಪ್ರದಾಯಿಕ ಮತಗಟ್ಟೆ



ಜಗಳೂರು ತಾಲ್ಲೂಕಿನ ಮುಸ್ಟೂರಿನಲ್ಲಿ ಮಳೆ ನೀರು ಸಂರಕ್ಷಣೆ ಮಾಹಿತಿಯ ಮತಗಟ್ಟೆ



ಜಯದೇವ ಹಾಸ್ಟೆಲ್‌ನಲ್ಲಿ ಮೆಕ್ಕೆಜೋಳ ಸ್ವಾಗತದ ಕಮಾನು ನಿರ್ಮಾಣ

## ಮತದಾರರನ್ನು ಸ್ವಾಗತಿಸಲು ವಿಶೇಷ ಮತಗಟ್ಟೆಗಳ ಸ್ಥಾಪನೆ

ದಾವಣಗೆರೆ : ಇಂದು ನಡೆಯುವ 18 ನೇ ಲೋಕಸಭಾ ಚುನಾವಣೆಯ ಮತದಾನಕ್ಕೆ ಸಾಂಪ್ರದಾಯಿಕ, ಧ್ಯೇಯ, ಸಖಿ, ಯುವ, ವಿಶೇಷಚೇತನರ ಮತಗಟ್ಟೆಗಳು ಕಂಗೊಳಿಸುತ್ತಿವೆ. ಪ್ರಜಾಪ್ರಭುತ್ವದ ಮತದಾನ ಹಬ್ಬವನ್ನು ಸಂಭ್ರಮದಿಂದ ಆಚರಣೆ ಮಾಡಲು ಜಿಲ್ಲೆಯಾದ್ಯಂತ 63 ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಿ ಮತದಾರರನ್ನು ಆಕರ್ಷಿಸಲಾಗುತ್ತಿದೆ. ವಿಶೇಷ ಮತಗಟ್ಟೆಗಳಲ್ಲಿ ಮಹಿಳಾ ಸಿಬ್ಬಂದಿಗಳಿಂದಲೇ ನಿರ್ವಹಿಸಲ್ಪಡುವ ಸಖಿ ಮತಗಟ್ಟೆ ಇವು ಜಿಲ್ಲೆಯಲ್ಲಿ 35 ಮತಗಟ್ಟೆಗಳು, ಧ್ಯೇಯ ಆಧಾರಿತ ಮತಗಟ್ಟೆಗಳಲ್ಲಿ ಅಡಿಕೆ, ಕೃಷಿ, ವೀಳ್ಯೆದೆಲೆ, ಸಂಚಾರ ನಿಯಂತ್ರಣ, ಜಲಸಂರಕ್ಷಣೆ, ಸ್ಕೌಟ್ ಅಂಡ್ ಗೈಡ್ಸ್, ಅರಣ್ಯ, ಅಂಗನವಾಡಿ, ಸಾಂಪ್ರದಾಯಿಕ ಮತಗಟ್ಟೆಗಳಲ್ಲಿ ಪರಿಸರ ಸ್ನೇಹಿ, ಲಂಬಾಣಿ ಸಂಸ್ಕೃತಿ, ಯಾದವ ಸಂಪ್ರದಾಯ, ಹಕ್ಕಿಪಿಕ್ಕಿ ಸಂಪ್ರದಾಯ ಸೇರಿದಂತೆ ಜನಜೀವನದ ಬಗ್ಗೆ ಗಮನ ಸೆಳೆಯುವ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

# ಸಾಂಪ್ರದಾಯಿಕ, ಧ್ಯೇಯ, ಸಖಿ, ಯುವ, ವಿಶೇಷಚೇತನರ ಮತಗಟ್ಟೆಗಳು

ದಾವಣಗೆರೆ, ಮೇ 6 - 18 ನೇ ಲೋಕಸಭಾ ಚುನಾವಣೆ ನಡೆಯುತ್ತಿದ್ದು ಪ್ರಜಾಪ್ರಭುತ್ವದ ಮತದಾನ ಹಬ್ಬವನ್ನು ಸಂಭ್ರಮದಿಂದ ಆಚರಣೆ ಮಾಡಲು ಜಿಲ್ಲೆಯಾದ್ಯಂತ 63 ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಿ ಮತದಾರರನ್ನು ಆಕರ್ಷಿಸಲಾಗುತ್ತಿದೆ.

ವಿಶೇಷ ಮತಗಟ್ಟೆಗಳಲ್ಲಿ ಮಹಿಳಾ ಸಿಬ್ಬಂದಿಗಳಿಂದಲೇ ನಿರ್ವಹಿಸಲ್ಪಡುವ ಸಖಿ ಮತಗಟ್ಟೆ ಇವು ಜಿಲ್ಲೆಯಲ್ಲಿ 35 ಮತಗಟ್ಟೆಗಳು, ಧ್ಯೇಯ ಆಧಾರಿತ ಮತಗಟ್ಟೆಗಳಲ್ಲಿ ಅಡಿಕೆ, ಕೃಷಿ, ವೀಳ್ಯೆದೆಲೆ, ಸಂಚಾರ ನಿಯಂತ್ರಣ, ಜಲ ಸಂರಕ್ಷಣೆ, ಸ್ಕೌಟ್ಸ್ ಅಂಡ್ ಗೈಡ್ಸ್, ಅರಣ್ಯ, ಅಂಗನವಾಡಿ, ಸಾಂಪ್ರದಾಯಿಕ ಮತಗಟ್ಟೆಗಳಲ್ಲಿ ಪರಿಸರ ಸ್ನೇಹಿ, ಲಂಬಾಣಿ ಸಂಸ್ಕೃತಿ, ಯಾದವ ಸಂಪ್ರದಾಯ, ಹಕ್ಕಿಪಿಕ್ಕಿ ಸಂಪ್ರದಾಯ ಸೇರಿದಂತೆ ಜನ ಜೀವನದ ಬಗ್ಗೆ ಗಮನ ಸೆಳೆಯುವ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಯುವಕರಿಂದ ನಿರ್ವಹಿಸಲ್ಪಡುವ ಯುವ ಮತಗಟ್ಟೆಗಳು, ವಿಶೇಷಚೇತನರಿಂದ ನಿರ್ವಹಿಸಲ್ಪಡುವ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

**ಮತದಾನ ಹಬ್ಬವನ್ನು ಸಂಭ್ರಮದಿಂದ ಆಚರಣೆ ಮಾಡಲು ಜಿಲ್ಲೆಯಾದ್ಯಂತ 63 ವಿಶೇಷ ಮತಗಟ್ಟೆಗಳ ಸ್ಥಾಪನೆ**

**ಸಾಂಪ್ರದಾಯಿಕ ಮತಗಟ್ಟೆ :**

ದಾವಣಗೆರೆ ದಕ್ಷಿಣ ಕ್ಷೇತ್ರದ ಮತಗಟ್ಟೆ 169ರ ಜಾಲಿನಗರದ ಜನತಾ ವಿದ್ಯಾಲಯದಲ್ಲಿ ಪರಿಸರ ಸ್ನೇಹಿಗೆ ಒತ್ತು ನೀಡಲಾಗಿದೆ. ಇಲ್ಲಿ ಬಿಸಿಲಿಗೆ ತಂಪಾಗಿರಲು ಮಣ್ಣಿನಿಂದ ಮಾಡಿದ ಮನೆ, ಛಾವಣಿ ಮೇಲೆ ತೆಂಗಿನ ಗರಿ, ಮಣ್ಣಿನಿಂದ ಮಡಿಕೆ ತಯಾರಿಸುವ ಟಗರಿ, ಉಪಯೋಗಿಸುವ ಮಡಿಕೆಗಳ ಪ್ರದರ್ಶನ, ಬಾವಿಯ ಸಂರಕ್ಷಣೆ, ಪಕ್ಷಿಗಳಿಗೆ ನೀರುಣಿಸುವುದು, ಪ್ಲಾಸ್ಟಿಕ್ ಬದಲಾಗಿ ಬಿದಿರಿನಿಂದ ತಯಾರಿಸಿದ ಬೀಸಣಿಕೆ, ಬುಟ್ಟಿಗಳ ಉಪಯೋಗ, ಪ್ಲಾಸ್ಟಿಕ್ ಬ್ಯಾಗ್ ಬದಲಾಗಿ ಬಟ್ಟೆ ಬ್ಯಾಗ್‌ಗಳ ಉಪಯೋಗ ಮಾಡುವ ಮೂಲಕ ಪರಿಸರ ಸಂರಕ್ಷಣೆ ವಿಷಯಾಧಾರಿತ ಮತಗಟ್ಟೆಯಾಗಿದೆ. ಇದನ್ನು ಚಿತ್ರಕಲಾ ಪರಿಷತ್ ಕಲಾವಿದರು ನಿರ್ಮಾಣ ಮಾಡಿರುವರು.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಅವರುಗಳು ಮತಗಟ್ಟೆಗಳಿಗೆ ಭೇಟಿ ನೀಡಿ ವೀಕ್ಷಣೆ ಮಾಡಿದರು.

**ಸಖಿ ಮತಗಟ್ಟೆಗೆ ಭೇಟಿ :**

ದಾವಣಗೆರೆ ಉತ್ತರದ ಎಂ.ಸಿ.ಸಿ. ಬಿ. ಬ್ಲಾಕ್‌ನಲ್ಲಿನ ಮತಗಟ್ಟೆ 208ರಲ್ಲಿ ಸಖಿ ಮತಗಟ್ಟೆಯನ್ನು ಸ್ಥಾಪಿಸಿದ್ದು, ಇಲ್ಲಿ ಪಿಆರ್‌ಓ, ಎಪಿಆರ್‌ಓ, ಮತಗಟ್ಟೆ ಸಿಬ್ಬಂದಿಗಳು ಮಹಿಳೆಯರೇ ಆಗಿರುತ್ತಾರೆ. ಇಲ್ಲಿ 656 ಪುರುಷ, 671 ಮಹಿಳಾ ಮತದಾರರು ಸೇರಿ 1327 ಮತದಾರರಿದ್ದಾರೆ.

ದಾವಣಗೆರೆ ಉತ್ತರದ ಬೇತೂರು ಗ್ರಾಮ ಪಂಚಾಯತ್‌ನಲ್ಲಿನ 2 ರ ಸಖಿ ಮತಗಟ್ಟೆಯಲ್ಲಿ 564 ಪುರುಷ, 593 ಮಹಿಳಾ ಮತದಾರರು ಸೇರಿ 1157 ಮತದಾರರಿದ್ದಾರೆ.

ಇಲ್ಲಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್ ಭೇಟಿ ನೀಡಿ, (2ನೇ ಪುಟಕ್ಕೆ)

# ರಾಜ್ಯದಲ್ಲಿ ಇಂದು ದಾವಣಗೆರೆ ಸೇರಿದಂತೆ 14 ಕ್ಷೇತ್ರಗಳಿಗೆ 2ನೇ ಹಂತದ ಮತದಾನ

ಬೆಂಗಳೂರು, ಮೇ 6 - ಕೇಂದ್ರದ ಸಚಿವರು, ಮಾಜಿ ಮುಖ್ಯಮಂತ್ರಿಗಳು, ಸಚಿವರ ಕುಟುಂಬದ ಸದಸ್ಯರು ಕಣದಲ್ಲಿರುವ ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಎರಡನೇ ಹಾಗೂ ಅಂತಿಮ ಹಂತದ ಮತದಾನ ಮಂಗಳವಾರ ಜರುಗಲಿದೆ.

ಮುಕ್ತ, ನ್ಯಾಯಸಮ್ಮತ ಹಾಗೂ ಶಾಂತಿಯುತ ಮತದಾನಕ್ಕೆ ಕೇಂದ್ರದ ಚುನಾವಣಾ ಆಯೋಗ ಸಕಲ ಸಿದ್ಧತೆ ನಡೆಸಿದ್ದು, ಹಳೆ ಮೈಸೂರು ಭಾಗದಲ್ಲಿ ಬೀಡು ಬಿಟ್ಟಿದ್ದ ಅರೆಸೇನಾ ಪಡೆ ಹಾಗೂ ಹೊರ ರಾಜ್ಯದ ಪೊಲೀಸ್ ಸಿಬ್ಬಂದಿಯನ್ನು ನಾಳೆ ನಡೆಯಲಿರುವ ಲೋಕಸಭಾ ಕ್ಷೇತ್ರಗಳಿಗೆ ಸ್ಥಳಾಂತರಿಸಿದೆ.

ದಾವಣಗೆರೆ, ಶಿವಮೊಗ್ಗ, ಉತ್ತರ ಕನ್ನಡ, ಧಾರವಾಡ, ಹಾವೇರಿ, ಬೆಳಗಾವಿ, ಚಿಕ್ಕೋಡಿ, ವಿಜಾಪುರ, ಬಾಗಲಕೋಟೆ, ಗುಲ್ಬರ್ಗ, ಬೀದರ್, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬೆಳಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಮತದಾನ ನಡೆಯಲಿದೆ.

ಮಲೆನಾಡು ಮತ್ತು ಕರಾವಳಿ ತೀರದ ಎರಡು-ಮೂರು ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದೆಲ್ಲಾ ಕ್ಷೇತ್ರಗಳು ಅತಿ ತಾಪಮಾನ ಹೊಂದಿರುವ ಕ್ಷೇತ್ರಗಳಾಗಿವೆ.

ಹಳೆ ಮೈಸೂರು ಭಾಗದ 14 ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಏಪ್ರಿಲ್ 26ರಂದು ಮತದಾನ ಮುಗಿಯುತ್ತಿದ್ದಂತೆ ರಾಜಕೀಯ ಪಕ್ಷಗಳ ಮುಖಂಡರು ತಮ್ಮ ಅಭ್ಯರ್ಥಿಗಳ ಗೆಲುವಿಗೆ ಇತ್ತ ಗಮನ ಹರಿಸಿದರು. ಈ ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ಮತ್ತು ಆಡಳಿತಾರೂಢ ಕಾಂ ಗ್ರೆಸ್ ನಡುವೆ ನೇರ ಹಣಾಹಣಿ ನಡೆದಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿರುವ ಅಭಿವೃದ್ಧಿ ಹಾಗೂ ಹಿಂದುತ್ವ ಮುಂದಿಟ್ಟುಕೊಂಡು ಬಿಜೆಪಿ ಬಿರುಸಿನ ಪ್ರಚಾರ ಮಾಡಿ ಮತದಾರರ ಓಲೈಕೆಗೆ ಮುಂದಾಗಿದ್ದರೆ, ರಾಜ್ಯದಲ್ಲಿನ ಆಡಳಿತಾರೂಢ ಕಾಂಗ್ರೆಸ್ ತಮ್ಮ ಐದು ಗ್ಯಾರಂಟಿಗಳನ್ನು ಬದಿಗಿಟ್ಟು ಪ್ರಜ್ವಲ್ ರೇವಣ್ಣ ಲೈಂಗಿಕ (2ನೇ ಪುಟಕ್ಕೆ)

## ದೇಶದಲ್ಲಿ ಇಂದು 93 ಕ್ಷೇತ್ರಗಳಿಗೆ ಮೂರನೇ ಹಂತದ ಮತದಾನ

ನವದೆಹಲಿ, ಮೇ 6 - ಲೋಕಸಭಾ ಚುನಾವಣೆಯ ಮೂರನೇ ಹಂತಕ್ಕೆ ಮಂಗಳವಾರ ಮತದಾನ ನಡೆಯಲಿದೆ. 11 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 93 ಕ್ಷೇತ್ರಗಳಿಗೆ ಮತದಾನವಾಗಲಿದೆ. ಗುಜರಾತ್, ಕರ್ನಾಟಕ ಹಾಗೂ ಮಧ್ಯ ಪ್ರದೇಶದಲ್ಲಿ ಹೆಚ್ಚು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ.

ಮೂರನೇ ಹಂತದಲ್ಲಿ 1,300ಕ್ಕೂ ಹೆಚ್ಚು ಅಭ್ಯರ್ಥಿಗಳಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಷಾ, ಜ್ಯೋತಿರಾದಿತ್ಯ ಸಿಂಧಿಯಾ, ಮನ್‌ಸುಖ್ ಮಾಂಡವೀಯ, ಪರ್ಶೋತ್ತಮ್ ರುಪಾಲ, ಪ್ರಹ್ಲಾದ್ ಜೋಷಿ ಹಾಗೂ ಎಸ್.ಪಿ. ಸಿಂಗ್ ಬಾಗೇಲ್ ಅವರು ಮೂರನೇ ಹಂತದಲ್ಲಿ ಕಣದಲ್ಲಿದ್ದಾರೆ.

17.24 ಕೋಟಿ ಮತದಾರರು ತಮ್ಮ ಹಕ್ಕು (2ನೇ ಪುಟಕ್ಕೆ)



## ಬಿಜೆಪಿ ಧುರೀಣ ರವೀಂದ್ರನಾಥ್ ಆಶೀರ್ವಾದ ಪಡೆದ ಪ್ರಭಾ ಎಸ್ಸೆಸ್ಸೆಂ



ದಾವಣಗೆರೆ, ಮೇ 6- ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಮಾಜಿ ಸಚಿವರೂ ಆಗಿರುವ ಬಿಜೆಪಿ ಹಿರಿಯ ಧುರೀಣ ಎಸ್.ಎ. ರವೀಂದ್ರನಾಥ್ ಅವರನ್ನು ಅವರ ನಿವಾಸದಲ್ಲಿ ಇಂದು ಭೇಟಿಯಾಗಿ ಆಶೀರ್ವಾದ ಪಡೆದರು.

## ಸಿ.ಐ.ಎಸ್.ಸಿ.ಇ. ಫಲಿತಾಂಶ : 10ನೇ ತರಗತಿಯಲ್ಲಿ ಶೇ.99.47 ಫಲಿತಾಂಶ

ನವದೆಹಲಿ, ಮೇ 6 – ಸಿ.ಐ.ಎಸ್.ಸಿ.ಇ. ಹತ್ತು ಹಾಗೂ 12ನೇ ತರಗತಿಯ ಮಂಡಳಿ ಪರೀಕ್ಷೆ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಹತ್ತನೇ ತರಗತಿಯಲ್ಲಿ ಶೇ.99.47 ಹಾಗೂ 12ನೇ ತರಗತಿಯಲ್ಲಿ ಶೇ.98.19 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಹತ್ತನೇ ತರಗತಿಯಲ್ಲಿ ವಿದ್ಯಾರ್ಥಿಗಳ ಉತ್ತೀರ್ಣತೆಯ ಪ್ರಮಾಣ ಶೇ.99.31 ಹಾಗೂ ವಿದ್ಯಾರ್ಥಿನಿಯರ ಉತ್ತೀರ್ಣತೆ (2ನೇ ಪುಟಕ್ಕೆ)

# ಇಂದು ಮತದಾನ : ಮತಗಟ್ಟೆ ತಲುಪಿದ ಚುನಾವಣಾ ಸಿಬ್ಬಂದಿ



ದಾವಣಗೆರೆ, ಮೇ 6- ಲೋಕಸಭಾ ಚುನಾವಣಾ ಮತದಾನ ನಾಳೆ ದಿನಾಂಕ 7 ರಂದು ಬೆಳಗ್ಗೆ 7 ರಿಂದ ಸಂಜೆ 6 ರವರೆಗೆ ನಡೆಯಲಿದ್ದು, ಎಲ್ಲಾ ಕ್ಷೇತ್ರಗಳ ಮಸ್ಟರಿಂಗ್ ಕೇಂದ್ರಗಳಿಂದ ಸಿಬ್ಬಂದಿಗಳು ಮತಗಟ್ಟೆಯನ್ನು ತಲುಪಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

ಜಿಲ್ಲೆಯ 7 ವಿಧಾನಸಭಾ ಕ್ಷೇತ್ರ ಸೇರಿ, ವಿಜಯನಗರ ಜಿಲ್ಲೆಯ ಹರಪನಹಳ್ಳಿ ವಿಧಾನಸಭಾ ಕ್ಷೇತ್ರವು ದಾವಣಗೆರೆ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡಲಿದೆ. ಕ್ಷೇತ್ರದಲ್ಲಿ 8,51,990 ಪುರುಷ, 8,57,117 ಮಹಿಳೆ, 137 ಇತರೆ ಸೇರಿ 17,09,244 ಮತದಾರರಿದ್ದು 1946 ಮತಗಟ್ಟೆಗಳಿವೆ.

**ಬೆಳಗ್ಗೆ 7 ರಿಂದ ಸಂಜೆ 6 ರವರೆಗೆ ಮತದಾನಕ್ಕೆ ಅವಕಾಶ**

ಕ್ಷೇತ್ರವಾರು ವಿವರದನ್ವಯ ಜಗಳೂರು 263 ಮತಗಟ್ಟೆಗಳಲ್ಲಿ 100046 ಪುರುಷ, 98759 ಮಹಿಳೆ, 10 ಇತರೆ ಸೇರಿ 198815 ಮತದಾರರಿದ್ದಾರೆ.

ಹರಪನಹಳ್ಳಿ 253 ಮತಗಟ್ಟೆಗಳಲ್ಲಿ 112969 ಪುರುಷ, 110985 ಮಹಿಳೆ ಹಾಗೂ 19 ಇತರೆ ಸೇರಿ 223973 ಮತದಾರರು. ಹರಿಹರ (2ನೇ ಪುಟಕ್ಕೆ)

# ಪ್ರಜ್ವಲ್ ಪ್ರಕರಣದಲ್ಲಿ ದೇವೇಗೌಡ, ಕುಮಾರಸ್ವಾಮಿ ಹೆಸರು ಬಳಸದಂತೆ ತಡೆ

ಬೆಂಗಳೂರು, ಮೇ 6 - ಪ್ರಜ್ವಲ್ ರೇವಣ್ಣ ಹಾಗೂ ಎಚ್.ಡಿ.ರೇವಣ್ಣ ಪ್ರಕರಣದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮತ್ತು ಹೆಚ್.ಡಿ. ಕುಮಾರಸ್ವಾಮಿ ಅವರುಗಳ ಹೆಸರನ್ನು ಬಳಸದಂತೆ ನ್ಯಾಯಾಲಯ ತಡೆಯಾಜ್ಞೆ ನೀಡಿದೆ.

ಪ್ರಕರಣಗಳಿಗೆ ಸಂಬಂಧಿಸಿದಂತೆ ದೇವೇಗೌಡರ ಕುಟುಂಬದವರ ಹೆಸರುಗಳನ್ನು ಮಾಧ್ಯಮಗಳು ಹಾಗೂ ಕೆಲವರು ಪ್ರಸ್ತಾಪ ಮಾಡು ತ್ತಿದ್ದು, ಇನ್ನು ಮುಂದೆ ಹೆಸರುಗಳನ್ನು ಬಳಸದಂತೆ ತಡೆಯಾಜ್ಞೆ ನೀಡಬೇಕೆಂದು ಕೋರಿ ಇಬ್ಬರೂ ನಾಯಕರು ನ್ಯಾಯಾಲಯದ ಮೊರೆ ಹೋಗಿದ್ದರು.

ನಮ್ಮ ಕುಟುಂಬದವರ (2ನೇ ಪುಟಕ್ಕೆ)

## ಪ್ರಜ್ವಲ್ ಸಂಪರ್ಕ ಪೂರ್ಣ ಕಡಿತ ?



ಬೆಂಗಳೂರು, ಮೇ 6 - ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಪ್ರಜ್ವಲ್ ರೇವಣ್ಣ ಅವರ ಸಂಪರ್ಕ ಸಂಪೂರ್ಣವಾಗಿ ಕಡಿತಗೊಂಡಿದೆ ಎನ್ನಲಾಗುತ್ತಿದೆ. ಹಾಸನ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯೂ ಆಗಿರುವ ಪ್ರಜ್ವಲ್ ಮತದಾನ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಜರ್ಮನಿಗೆ ತೆರಳಿದ್ದರು.

ಅವರ ವಿರುದ್ಧ ರಾಜ್ಯ ಸರ್ಕಾರ ಪ್ರಕರಣ ದಾಖಲಿಸಿ ಎಸ್‌ಐಟಿ ರಚನೆ ಮಾಡಿದ್ದಲ್ಲದೆ, ಅವರನ್ನು (2ನೇ ಪುಟಕ್ಕೆ)

# ಕೆಲಸದವನ ಮನೆಯಲ್ಲಿ ಕೋಟಿಗಳ ರಾಶಿ ಪತ್ತೆ



ರಾಂಚಿ, ಮೇ 6 – ಜಾರ್ಖಂಡ್‌ನ ಸಚಿವ ಅಲಮ್‌ಗೀರ್ ಆಲಂ ಅವರ ಕಾರ್ಯದರ್ಶಿಯ ಮನೆಕೆಲಸದವ ಎನ್ನಲಾದ ವ್ಯಕ್ತಿಯ ಮನೆಯಲ್ಲಿ ಭಾರೀ ಪ್ರಮಾಣದ ಲೆಕ್ಕವಿರದ ಹಣ ಪತ್ತೆ ಮಾಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ. ಗಡಿಖಾನಾ ಚೌಕ್ ಬಳಿಯ ಕಟ್ಟಡವೊಂದರಲ್ಲಿರುವ ಕೋಣೆಯಿಂದ ಭಾರೀ ಪ್ರಮಾಣದ ಹಣವನ್ನು ತನಿಖಾ ಸಂಸ್ಥೆಯ ಅಧಿಕಾರಿಗಳು ಪತ್ತೆ ಮಾಡಿರುವ ವಿಡಿಯೋ ಹಾಗೂ ಚಿತ್ರಗಳು ಬೆಳಕಿಗೆ ಬಂದಿವೆ.

ಆಲಂ ಅವರ ಆಪ್ತ ಕಾರ್ಯದರ್ಶಿ ಸಂಜೀವ್ ಲಾಲ್ ಅವರ ಮನೆಕೆಲಸದ ವ್ಯಕ್ತಿ ಇದೇ ಕಟ್ಟಡದಲ್ಲಿರುವುದಾಗಿ ಹೇಳಲಾಗುತ್ತಿದೆ.

ಪತ್ತೆಯಾಗಿರುವ ಹಣದ ಮೊತ್ತ 20-30 ಕೋಟಿ ರೂ. ಎನ್ನಲಾಗುತ್ತಿದೆ. ಈ ಹಣ ಎಣಿಕೆಗಾಗಿ ಯಂತ್ರಗಳನ್ನು ತರಿಸಲಾಗುತ್ತಿದೆ ಎಂದು ಜಾರಿ ನಿರ್ದೇಶನಾಲಯದ ಮೂಲಗಳು ತಿಳಿಸಿವೆ.

ಆಲಂ ಅವರು ಕಾಂಗ್ರೆಸ್ ನಾಯಕರಾಗಿದ್ದು, ಜಾರ್ಖಂಡ್ ವಿಧಾನಸಭಾ ಕ್ಷೇತ್ರದ ಪಕುರ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

ಯುನಿಟಿ ಹೆಲ್ತ್ ಸೆಂಟರ್
5ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.



ಮತದಾನ ಜಾಗೃತಿ ವೈದ್ಯಕೀಯ ಶಿಬಿರ

ದಿನಾಂಕ 07-05-2024ರ ಮಂಗಳವಾರದಂದು ಮತದಾನ ಮಾಡಿ ಬೆರಳಿನ ಶಾಹಿ ಗುರುತನ್ನು ತೋರಿಸಿದವರಿಗೆ ಈ ಕೆಳಕಂಡ ವೈದ್ಯಕೀಯ ಸೌಲಭ್ಯಗಳನ್ನು ರಿಯಾಯಿತಿ ದರದಲ್ಲಿ ಕೊಡಲಾಗುವುದು.

1) ಒ.ಪಿ.ಡಿ. (ಹೊರ ರೋಗಿಗಳಿಗೆ) ರೂ. 50/-
2) ಲ್ಯಾಬೋರೇಟರಿ ಪರೀಕ್ಷೆಗಳಿಗೆ 50% ರಿಯಾಯಿತಿ
3) ಇ.ಸಿ.ಜಿ. ರೂ. 50/-
4) ಅಲ್ಟ್ರಾಸೌಂಡ್ 10% ರಿಯಾಯಿತಿ
5) ಎಂ.ಆರ್.ಐ. ಮತ್ತು ಸಿ.ಟಿ. ಸ್ಕ್ಯಾನ್ 10% ರಿಯಾಯಿತಿ

ಈ ಮೇಲ್ಕಂಡ ದರಗಳು ಮೊದಲು ಬಂದ 100 ರೋಗಿಗಳಿಗೆ ಮಾತ್ರ.

*NOTHING IN THIS COUNTRY IS FREE. IF YOU ARE GETTING SOMETHING WITHOUT PAYING FOR IT, THANK A TAXPAYER. NOT TO ANY POLITICAL PARTY*

*ದಿನಾಂಕ 07-05-2024ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ನಿಮ್ಮ ಅಮೂಲ್ಯವಾದ ಮತವನ್ನು ತಪ್ಪದೇ ಚಲಾಯಿಸಿ.*

ಡಾ|| ಬಿ.ಎಸ್. ನಾಗಪ್ರಕಾಶ್ ಡಾ|| ಬಿ.ಎನ್. ಅಭಿಷೇಕ್

ಲಿವರ್ ಟ್ರಾನ್ಸ್‌ಪ್ಲಾಂಟ್ ಕ್ಲಿನಿಕ್

ಡಾ. ಸುನಿಲ್ ಶೆಣೈ

ಎಂ.ಎಸ್ (ಜನರಲ್ ಸರ್ಜರಿ) ಎಂ.ಸಿ.ಹೆಚ್ (ಜಿ.ಐ ಮತ್ತು ಎಚ್.ಪಿ.ಬಿ ಸರ್ಜರಿ)
(ಎಕ್ಸ್) ಕ್ಲಿನಿಕಲ್ ಅಸಿಸ್ಟೆಂಟ್ ಪ್ರೊಫೆಸರ್, ಮೆಡಿಕಲ್ ಯೂನಿವರ್ಸಿಟಿ ಆಫ್ ಸೌತ್ ಕೆರೋಲಿನಾ, ಯು.ಎಸ್.ಎ ಬಹು ಅಂಗಾಂಗ ಕಸಿ ಶಸ್ತ್ರಚಿಕಿತ್ಸೆ–ತಜ್ಞರು

ಯಾರು ಪಾಲ್ಗೊಳ್ಳಬೇಕು?
• ಕಾಮಾಲೆ • ಕಿಬ್ಬೊಟ್ಟೆಯ ಹಿಗ್ಗುವಿಕೆ • ಸಾಮಾನ್ಯ ತುರಿಕೆ
• ಹೆಪಟೈಟಿಸ್ ಬಿ ಮತ್ತು ಸಿ • ಮದ್ಯಪಾನ ವ್ಯಸನ ಕಾಯಿಲೆ
• ಲಿವರ್ ಕ್ಯಾನ್ಸರ್
• ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್ • ಮತ್ತು ಪ್ಯಾಂಕ್ರಿಯಾಟೈಟಿಸ್

9ನೇ ಮೇ 2024 – ಗುರುವಾರ

ಅಪಾಯಿಂಟ್‌ಮೆಂಟ್‌ಗಾಗಿ : 76767 97676

ಮಧ್ಯಾಹ್ನ 12 ರಿಂದ 1 ರವರೆಗೆ
ಸಿಟಿ ಸೆಂಟ್ರಲ್ ಆಸ್ಪತ್ರೆ
#17, ಎ ವಿ ಕೆ ಕಾಲೇಜು ರಸ್ತೆ,
ಪಿ ಜೆ ವಿಸ್ತರಣೆ, ದಾವಣಗೆರೆ–577004

ಮಧ್ಯಾಹ್ನ 2 ರಿಂದ 3 ರವರೆಗೆ
ಯುನಿಟಿ ಹೆಲ್ತ್ ಸೆಂಟರ್
5ನೇ ಮುಖ್ಯ, ಜೈನ್ ಶಾಲೆ ಎದುರು,
P J ವಿಸ್ತರಣೆ, ದಾವಣಗೆರೆ–577002

TRUSTWELL HOSPITALS
Your Trust Our Care

ನಂ. 5, ಜೆ ಸಿ ರಸ್ತೆ, ಸುಧಾಮ ನಗರ, ಬೆಂಗಳೂರು, ಕರ್ನಾಟಕ 560002

# ಇಂದು ಮತದಾನ : ಮತಗಟ್ಟೆ ತಲುಪಿದ ಚುನಾವಣಾ ಸಿಬ್ಬಂದಿ







**(3ನೇ ಪುಟದಿಂದ)** ಕ್ಷೇತ್ರದ 228 ಮತಗಟ್ಟೆಗಳಲ್ಲಿ 105510 ಪುರುಷ, 106870 ಮಹಿಳೆ, 17 ಇತರೆ ಸೇರಿ 212397.

ದಾವಣಗೆರೆ ಉತ್ತರ 245 ಮತಗಟ್ಟೆಗಳಲ್ಲಿ 124485 ಪುರುಷ, 128635 ಮಹಿಳೆ, 36 ಇತರೆ ಸೇರಿ 253156. ದಾವಣಗೆರೆ ದಕ್ಷಿಣ 217 ಮತಗಟ್ಟೆ, 109184 ಪುರುಷ, 111774 ಮಹಿಳೆ, 39 ಇತರೆ ಸೇರಿ 220997.

ಮಾಯಕೊಂಡ 240 ಮತಗಟ್ಟೆಗಳಲ್ಲಿ 97759 ಪುರುಷ, 97326 ಮಹಿಳೆ, 4 ಇತರೆ ಸೇರಿ 195089.

ಚನ್ನಗಿರಿ 255 ಮತಗಟ್ಟೆಗಳಲ್ಲಿ 101653 ಪುರುಷ, 102208 ಮಹಿಳೆ, 9 ಇತರೆ ಸೇರಿ 203870.

ಹೊನ್ನಾಳಿ 245 ಮತಗಟ್ಟೆಗಳಲ್ಲಿ 100384 ಪುರುಷ, 100560 ಮಹಿಳೆ, 3 ಇತರೆ ಸೇರಿ 200947 ಮತದಾರರಿದ್ದಾರೆ.

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಒಟ್ಟು 1946 ಮತಗಟ್ಟೆಗಳಿದ್ದು ಇದರಲ್ಲಿ ಪ್ರತಿ ಮತಗಟ್ಟೆಯಲ್ಲಿ ಮತಗಟ್ಟೆ ಅಧ್ಯಕ್ಷಾಧಿಕಾರಿ, ಸಹಾಯಕ ಅಧ್ಯಕ್ಷಾಧಿಕಾರಿ, ಮತಗಟ್ಟೆ ಸಿಬ್ಬಂದಿ 2 ಸೇರಿ ಪ್ರತಿ ಮತಗಟ್ಟೆಗಳಲ್ಲಿ ಭದ್ರತಾ ಸಿಬ್ಬಂದಿ ಹೊರತುಪಡಿಸಿ 4 ಜನ ಮತದಾನ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಾರೆ. ಕ್ಷೇತ್ರದಲ್ಲಿ ಹೆಚ್ಚುವರಿ ಸೇರಿದಂತೆ ಒಟ್ಟು 8996 ಮತದಾನ ಸಿಬ್ಬಂದಿಗಳನ್ನು ನಿಯೋಜಿಸಿದ್ದು, ಅವರು ಎಲ್ಲಾ ತಾಲ್ಲೂಕುಗಳ ಮಸ್ಟರಿಂಗ್ ಕೇಂದ್ರದಿಂದ ಇವಿಎಂನೊಂದಿಗೆ, ವಿವಿಪ್ಯಾಟ್, ಬ್ಯಾಲೆಟ್ ಯುನಿಟ್ ಸೇರಿದಂತೆ ಶಾಸನಬದ್ದ ಲಕೋಟೆಗಳು, ಶಾಸನಬದ್ದವಲ್ಲದ ಲಕೋಟೆಗಳೊಂದಿಗೆ ಮತಗಟ್ಟೆ ತಲುಪಿದ್ದಾರೆ.

ಜಗಳೂರು ಸರ್ಕಾರಿ ಪದವಿ ಪೂರ್ವ ಕಾಲೇಜು, ಹರಿಹರ ಸೆಂಟ್ ಮೇರಿಸ್ ಕಾನ್ವೆಂಟ್ ಸ್ಕೂಲ್, ದಾವಣಗೆರೆ ಉತ್ತರ ಡಿ. ಆರ್.ಆರ್.ವಿದ್ಯಾಸಂಸ್ಥೆ, ದಾವಣಗೆರೆ ದಕ್ಷಿಣ ಹೈಸ್ಕೂಲ್ ಮೈದಾನ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಮಾಯಕೊಂಡ ಮೋತಿ ವೀರಪ್ಪ ಪದವಿ ಪೂರ್ವ ಕಾಲೇಜು, ಚನ್ನಗಿರಿ ಶ್ರೀ ಶಿವಲಿಂಗೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾಳಿ ಶ್ರೀಮತಿ ಗಂಗಮ್ಮ ಶ್ರೀ ವೀರಭದ್ರಶಾಸ್ತ್ರಿ ಕೈಗಾರಿಕಾ ತರಬೇತಿ ಕೇಂದ್ರ, ಹಿರೇಕಲ್ಮಠ ಇಲ್ಲಿ ಮಸ್ಟರಿಂಗ್ ನಡೆದಿದ್ದು, ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿ ಡಾ. ವೆಂಕಟೇಶ್ ಅವರು, ದಾವಣಗೆರೆ ಉತ್ತರ, ಮಾಯಕೊಂಡ, ಚನ್ನಗಿರಿ, ಹೊನ್ನಾಳಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಲ್ಲೆಯಲ್ಲಿ ಪ್ರತಿ ಕ್ಷೇತ್ರದಲ್ಲಿ 5 ಮತಗಟ್ಟೆಗಳನ್ನು ಸಖಿ ಮತಗಟ್ಟೆಯನ್ನಾಗಿ ಮಾಡಲಾಗಿದೆ. ಮಹಿಳಾ ಸಿಬ್ಬಂದಿಗಳಿಂದ ನಿರ್ವಹಿಸಲ್ಪಡುವ ಮತಗಟ್ಟೆ ಇದಾಗಿದ್ದು ಎಲ್ಲಾ ಪಿಂಕ್ ಬಣ್ಣದಿಂದ ಕೂಡಿರುತ್ತದೆ. ಪಿಂಕ್ ಬಣ್ಣದಿಂದ ಸಿಂಗಾರಗೊಂಡಿರುವ ಮತಗಟ್ಟೆ, ಮತಗಟ್ಟೆಯಲ್ಲಿನ ಸಿಬ್ಬಂದಿಗಳು ಸಹ ಪಿಂಕ್ ಬಣ್ಣದ ಸ್ಯಾರಿಯನ್ನು ಧರಿಸಿರುತ್ತಾರೆ. ಚನ್ನಗಿರಿ ಪಟ್ಟಣದ ಬಿ.ಇ.ಓ ಕಚೇರಿ ಹಿಂಭಾಗದ ಸರ್ಕಾರಿ ಸಂಯುಕ್ತ ಬಾಲಕಿಯರ ಪ್ರೌಢಶಾಲೆಯಲ್ಲಿ ಇರುವ 169 ಮತಗಟ್ಟೆಯನ್ನು ಸಖಿ ಮತಗಟ್ಟೆಯನ್ನಾಗಿ ನಿರ್ಮಾಣ ಮಾಡಲಾಗಿದೆ.

ಇಲ್ಲಿ ಪುರುಷ 608, ಮಹಿಳೆ 636 ಸೇರಿ ಒಟ್ಟು 1244 ಮತದಾರರಿದ್ದಾರೆ. ಅಲ್ಲದೇ, ಜಿಲ್ಲೆಯಲ್ಲಿ ತಲಾ 1ಕ್ಷೇತ್ರದಲ್ಲಿ 1ರಂತೆ ವಿಶೇಷಚೇತನರ ಮತಗಟ್ಟೆಯನ್ನು ಸ್ಥಾಪಿಸಲಾಗಿದ್ದು, ಇಲ್ಲಿನ ಮತಗಟ್ಟೆ ಸಿಬ್ಬಂದಿಗಳೆಲ್ಲರೂ ವಿಶೇಷಚೇತನರಾಗಿರುತ್ತಾರೆ.

# ಹರಿಹರದಲ್ಲಿ ಚುನಾವಣಾ ಸಿಬ್ಬಂದಿಗೆ ಇಡಿಸಿ ವಿತರಣೆ

ಹರಿಹರ, ಮೇ 6 - ನಗರದ ಹರಪನಹಳ್ಳಿ ರಸ್ತೆಯ ಸೆಂಟ್ ಮೇರಿಸ್ ಶಾಲಾ ಆವರಣದಲ್ಲಿ ಲೋಕಸಭಾ ಚುನಾವಣೆಯಲ್ಲಿ ಕರ್ತವ್ಯ ನಿರತ 1436 ಇಡಿಸಿ ಪತ್ರವನ್ನು ನೋಡಲ್ ಅಧಿಕಾರಿ ಬಿ.ಇ.ಓ.ಎಂ. ಹನುಮಂತಪ್ಪ ವಿತರಣೆ ಮಾಡಿದರು.

ಹೊರ ಜಿಲ್ಲೆ ಮತಗಟ್ಟೆ ಅಧಿಕಾರಿಗಳು 227, ಚುನಾವಣೆ ಪ್ರಮಾಣ ಪತ್ರ ಸಿಬ್ಬಂದಿಗಳು 836, ಎ.ವಿ.ಇ.ಎಸ್. ಅಧಿಕಾರಿಗಳು 94 ಪೊಲೀಸ್ ಸಿಬ್ಬಂದಿಗಳು 119 ಸೇರಿದಂತೆ ಒಟ್ಟು1436 ಕರ್ತವ್ಯ ನಿರತ ಸಿಬ್ಬಂದಿಗಳಿಗೆ ಇ.ಡಿ.ಸಿ. ಪತ್ರವನ್ನು ನೀಡಿದರು.

ಚುನಾವಣೆ ಪ್ರಮಾಣ ಪತ್ರಗಳು ಬಹುತೇಕ ಎಲ್ಲರಿಗೂ ತಲುಪಿದ್ದು, ಉಳಿದ ತಲುಪದೇ ಇರುವ ಸಿಬ್ಬಂದಿಗಳಿಗೆ ಸೆಕ್ಟರ್ ಅಧಿಕಾರಿಗಳ ಜೊತೆಗೆ ಕಳಿಸಿಕೊಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶಿಲ್ದಾರ್ ಗುರುಬಸವರಾಜ್, ಪೌರಾಯುಕ್ತ ಐಗೂರು ಬಸವರಾಜ್, ಕೃಷಿ ಇಲಾಖೆಯ ನಾರನಗೌಡ, ಶಿಕ್ಷಣ ಇಲಾಖೆಯ ಬಸವರಾಜಯ್ಯ, ನಂಜುಂಡಪ್ಪ, ಸತೀಶ್ ಕುಮಾರ್, ಶಿಲ್ಪಾ, ಲಕ್ಷ್ಮಿ ದೇವಿ, ಡಿ. ಮಂಜುನಾಥ್, ತಾಲ್ಲೂಕು ಆಡಳಿತದ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.



## ಮತದಾನದ ಜಾಗ್ರತೆಗಾಗಿ

ಮರೆಯದೆ ನೀವು ಮಾಡಿರಿ ಮತದಾನ
ಭವ್ಯ ಭಾರತಕ್ಕೆ ಇದುವೇ ಸೋಪಾನ

ಮತದಾನ ಮಾಡಿದರೆ ನೀವೆಲ್ಲಾ
ದೇಶಕ್ಕೆ ಆಗುವುದು ಒಳಿತೆಲ್ಲಾ

ಮನೆ ಮಂದಿ ಮಾಡಿದ ಮತದಾನವು
ಸದೃಢ ಭಾರತಕ್ಕೆ ನೀವು ಕೊಡುವ ಬಲವು

ಮತದಾನದ ಜಾಗೃತಿಗೆ ತೊಡಗೋಣ ನಾವೆಲ್ಲಾ
ಜನತೆಗೆ ಅರಿವಾದರೆ ಸಾರ್ಥಕತೆ ಸಾಕಲ್ಲಾ

ಕಡ್ಡಾಯ ಮತದಾನ ಆಗಬೇಕಿದೆ ಜನಕೆ
ಇಲ್ಲದಿದ್ದರೆ ದಂಡ ತೆರಬೇಕು ಅದಕೆ

ಸೂಕ್ತ ವ್ಯಕ್ತಿ ಆರಿಸಲು ಚುನಾವಣೆಯೇ ಸಂದರ್ಭ
ಹೀಗಾಗಿ ದೇಶವನು ಉಳಿಸಬೇಕು ಅನಿವಾರ್ಯ

ಈಗ ನಾವು ಮತದಾನ ಮಾಡೋಣ
ಪ್ರಜಾಪ್ರಭುತ್ವವನ್ನು ಬಲಗೊಳಿಸೋಣ

**- ಪೂರ್ಣಿಮಾ ಎಲ್. ಬಸವರಾಜ್**, ದಾವಣಗೆರೆ.

## ಚಿತ್ರದುರ್ಗ : ಕ್ರೀಡಾ ಉತ್ಸವ

ಎಸ್‌ಜೆಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಇಂದಿನಿಂದ ಮೂರು ದಿನ 'ಸ್ಫೂರ್ತಿ-2024 ಕ್ರೀಡಾ ಮತ್ತು ಸಾಂಸ್ಕೃತಿಕ ಉತ್ಸವ' ನಡೆಯಲಿದೆ.

ಇಂದು ಬೆಳಿಗ್ಗೆ 10.30ಗಂಟೆಗೆ ಜಯದೇವ ವೇದಿಕೆಯಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ.

## ದಾವಣಗೆರೆ ಸೇರಿದಂತೆ 14 ಕ್ಷೇತ್ರಗಳಿಗೆ ಮತದಾನ

**(3ನೇ ಪುಟದಿಂದ)** ದೌರ್ಜನ್ಯ ಹಗರಣ ಹಾಗೂ ಪ್ರಧಾನಿ ಅವರನ್ನು ನಿಂದಿಸುವ ಅಸ್ತ್ರವಾಗಿಟ್ಟುಕೊಂಡು ಕಾಂಗ್ರೆಸ್ ಮತದಾರರ ಮನ ಗೆಲ್ಲುವ ಪ್ರಯತ್ನ ಮಾಡಿದೆ.

ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲುವಿನ ದಡ ಮುಟ್ಟಿಸಲು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ವಾದ್ರಾ, ರಾಜ್ಯ ನಾಯಕರ ಜೊತೆಗೂಡಿ ಬಿರುಸಿನ ಪ್ರಚಾರ ನಡೆಸಿದರು.

ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಷಿ, ಭಗವಂತ ಖೂಬಾ ಮರು ಆಯ್ಕೆ ಬಯಸಿ ಧಾರವಾಡ ಹಾಗೂ ಬೀದರ್ ಕ್ಷೇತ್ರಗಳಿಂದ ಕಣಕ್ಕಿಳಿದಿದ್ದಾರೆ.

ಇನ್ನು ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ ಹಾಗೂ ಬಸವರಾಜ ಬೊಮ್ಮಾಯಿ ಕಮಲದ ಚಿಹ್ನೆಯಡಿ ಬೆಳಗಾವಿ ಮತ್ತು ಹಾವೇರಿಯಿಂದ ಸ್ಪರ್ಧಿಸಿದ್ದಾರೆ.

ಸಿದ್ದರಾಮಯ್ಯ ಸಂಪುಟದಲ್ಲಿರುವ ಎಸ್.ಎಸ್.ಮಲ್ಲಿಕಾರ್ಜುನ್ ತಮ್ಮ ಪತ್ನಿ ಪ್ರಭಾ ಮಲ್ಲಿಕಾರ್ಜುನ್ ಅವರನ್ನು ದಾವಣಗೆರೆಯಿಂದ ಕಣಕ್ಕಿಳಿಸಿದ್ದಾರೆ. ಸತೀಶ್ ಜಾರಕಿಹೊಳಿ, ಶಿವಾನಂದ ಪಾಟೀಲ್, ಈಶ್ವರ್ ಖಂಡ್ರೆ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ಸಹ ತಮ್ಮ ಮಕ್ಕಳನ್ನು ಕಣಕ್ಕಿಳಿಸಿ ಅದೃಷ್ಟ ಪರೀಕ್ಷೆ ನಡೆಸಿದ್ದಾರೆ.

ರಾಜ್ಯ ಮೊದಲ ಹಂತಕ್ಕಿಂತ ಎರಡನೇ ಹಂತದಲ್ಲಿ ಘಟಾನುಘಟಿಗಳು ಕಣದಲ್ಲಿರುವುದರಿಂದ ಹೆಚ್ಚು ಮತದಾನ ಆಗುವ ನಿರೀಕ್ಷೆ ಇದೆ. ಆದರೆ ಸುಡು ಬಿಸಿಲು ಇದಕ್ಕೆ ಹೇಗೆ ಅವಕಾಶ ಮಾಡಿಕೊಡುತ್ತದೆ ಎಂದು ಕಾದು ನೋಡಬೇಕು. ಘಟಾನುಘಟಿಗಳೂ ಸೇರಿದಂತೆ ಒಟ್ಟು 227 ಮಂದಿ ಕಣದಲ್ಲಿದ್ದು ಇವರ ರಾಜಕೀಯ ಭವಿಷ್ಯವನ್ನು 2,59,17,493 ಮತದಾರರು ನಿರ್ಧರಿಸಲಿದ್ದಾರೆ.

### ಮೂರನೇ ಹಂತದ ಮತದಾನ

**(3ನೇ ಪುಟದಿಂದ)** ಚಲಾಯಿಸುವ ಅರ್ಹತೆ ಪಡೆದಿದ್ದಾರೆ. ಇವರಿಗಾಗಿ 1.85 ಲಕ್ಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಬಿಜೆಪಿಯು ಗುಜರಾತ್‌ನ ಸೂರತ್ ಕ್ಷೇತ್ರವನ್ನು ಈಗಾಗಲೇ ಅವಿರೋಧವಾಗಿ ಪಡೆದುಕೊಡಿದೆ. ರಾಜ್ಯದ ಉಳಿದ 25 ಕ್ಷೇತ್ರಗಳ ಚುನಾವಣೆ ಮಹತ್ವ ಪಡೆದುಕೊಂಡಿದೆ. ಕರ್ನಾಟಕದ 14, ಮಹಾರಾಷ್ಟ್ರದ 11, ಉತ್ತರ ಪ್ರದೇಶದ 10 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಅಮಿತ್ ಷಾ ಅವರು ಗುಜರಾತ್‌ನ ಗಾಂಧಿನಗರ ಲೋಕಸಭಾ ಕ್ಷೇತ್ರದಲ್ಲಿ ಮತದಾನ ಮಾಡಲಿದ್ದಾರೆ.

## ದೇವೇಗೌಡ, ಕುಮಾರಸ್ವಾಮಿ ಹೆಸರು ಬಳಸದಂತೆ ತಡೆ

**(3ನೇ ಪುಟದಿಂದ)** ಹೆಸರುಗಳನ್ನು ಪ್ರಸ್ತಾಪ ಮಾಡುತ್ತಿರುವುದರಿಂದ ತೀವ್ರ ಮುಜುಗರ ಎದುರಿಸುವಂತಾಗಿದೆ. ಪ್ರಕರಣಕ್ಕೂ ನಮಗೂ ಸಂಬಂಧ ಇಲ್ಲದಿದ್ದರೂ ಕೆಲವರು ಇದನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆಂದು ಉಭಯ ನಾಯಕರು ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿದ್ದರು.

ಮನವಿ ಸ್ವೀಕರಿಸಿದ ಸೆಷನ್ಸ್ ನ್ಯಾಯಾಲಯ, ಪ್ರಜ್ವಲ್ ಹಾಗೂ ರೇವಣ್ಣ ಪ್ರಕರಣಗಳಿಗೆ ಸಂಬಂಧಿಸಿದಂತೆ ದೇವೇಗೌಡ ಮತ್ತು ಕುಮಾರಸ್ವಾಮಿ ಅವರುಗಳ ಹೆಸರು ಬಳಸದಂತೆ ತಡೆಯಾಜ್ಞೆ ನೀಡಿದೆ.

ಈ ಮಧ್ಯೆ ಅಪಹರಣ ಮೊಕದ್ದಮೆಯಲ್ಲಿ ಜಾಮೀನು ಕೋರಿ ಹೆಚ್.ಡಿ.ರೇವಣ್ಣ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ.

### ಪ್ರಜ್ವಲ್ ಸಂಪರ್ಕ ಪೂರ್ಣ ಕಡಿತ ?

**(3ನೇ ಪುಟದಿಂದ)** ಪತ್ತೆ ಹಚ್ಚಿ ಕರೆತರಲು ಲುಕ್‌ಔಟ್‌ನೋಟಿಸ್‌ಹೊರಡಿಸಲಾಗಿತ್ತು. ಈ ನೋಟಿಸ್‌ನಿಂದ ಪತ್ತೆಯಾಗದ ನಂತರ ಬ್ಲೂ ಕಾರ್ನರ್ ನೋಟಿಸ್ ಹೊರಡಿಸಲಾಯಿತು, ಈ ನೋಟಿಸ್ ಹೊರಬೀಳುತ್ತಿದ್ದಂತೆ ಅವರು ಜರ್ಮನಿಯಿಂದ ಕೊಲ್ಲಿ ರಾಷ್ಟ್ರಕ್ಕೆ ಧಾವಿಸಿದ ಮಾಹಿತಿ ಎಸ್‌ಐಟಿ ಮತ್ತು ಅವರ ಕುಟುಂಬದವರಿಗೆ ಬಂದಿತ್ತು.

ಮಸ್ಕಟ್ ನಗರದ ಉದ್ಯಮಿ ಒಬ್ಬರ ಫ್ಲಾಟ್‌ನಲ್ಲಿ ಉಳಿದುಕೊಂಡಿದ್ದು, ಕಳೆದ ಶನಿವಾರವೇ ಭಾರತಕ್ಕೆ ಹಿಂದಿರುಗುತ್ತಾರೆ ಎಂಬ ಮಾಹಿತಿ ಇತ್ತು.

ಹಿಂತಿರುಗುತ್ತಿದ್ದಂತೆ ಅವರನ್ನು ಬಂಧಿಸಲು ಮಂಗಳೂರು ಮತ್ತು ಕೊಚ್ಚಿ ವಿಮಾನ ನಿಲ್ದಾಣಗಳಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಸಂಜೆಯಾಗುತ್ತಿದ್ದಂತೆ ಅವರೊಂದಿಗಿನ ಸಂಪರ್ಕ ಸಂಪೂರ್ಣ ಕಡಿತಗೊಂಡಿತು.

ಅವರ ಚಲನ ವಲನದ ಬಗ್ಗೆ ಕುಟುಂಬಕ್ಕೂ ಹಾಗೂ ಎಸ್‌ಐಟಿಗೂ ಯಾವುದೇ ಮಾಹಿತಿ ಲಭ್ಯವಾಗುತ್ತಿಲ್ಲ.

ಉನ್ನತ ಮೂಲಗಳ ಪ್ರಕಾರ ಅವರು ಕರ್ನಾಟಕದಲ್ಲಿ ನಡೆಯುತ್ತಿರುವ ಎರಡನೇ ಹಂತದ ಚುನಾವಣಾ ಮತದಾನದ ನಂತರ, ಇಲ್ಲವೇ ರಾಷ್ಟ್ರದಲ್ಲಿ ನಡೆಯುತ್ತಿರುವ ಲೋಕಸಭಾ ಚುನಾವಣಾ ಪ್ರಕ್ರಿಯೆ ಪೂರ್ಣವಾಗಿ ಮುಗಿದ ನಂತರವಷ್ಟೇ ಹಿಂತಿರುಗಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ಇಷ್ಟರ ನಡುವೆಯೂ ಪ್ರಕರಣವನ್ನು ಎಸ್‌ಐಟಿ ಗಂಭೀರವಾಗಿ ತೆಗೆದುಕೊಂ ಡಿದ್ದು, ಅವರ ಪತ್ತೆಗಾಗಿ ತೀವ್ರ ಯತ್ನ ನಡೆಸುತ್ತಿದೆ.

## ಸಿ.ಐ.ಎಸ್.ಸಿ.ಇ. : 10ನೇ ತರಗತಿಯಲ್ಲಿ ಶೇ.99.47 ಫಲಿತಾಂಶ

**(3ನೇ ಪುಟದಿಂದ)** ಪ್ರಮಾಣ ಶೇ.99.65 ಆಗಿದೆ. 12ನೇ ತರಗತಿಯಲ್ಲಿ ಶೇ.97.53 ವಿದ್ಯಾರ್ಥಿಗಳು ಹಾಗೂ ಶೇ.98.82ರಷ್ಟು ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ.





ಹೊಂಡದ ರಸ್ತೆ, ಜಾಲಿನಗರದ ಜನತಾ ವಿದ್ಯಾಲಯ ಇಂಗ್ಲೀಷ್ ಮೀಡಿಯಂ ಸ್ಕೂಲ್‌ನಲ್ಲಿ ಸಾಂಪ್ರದಾಯಿಕ ಮತಗಟ್ಟೆ



ಗ್ರಾಮ ಪಂಚಾಯತಿಯೊಂದರಲ್ಲಿ ಸಖಿ ಮತಗಟ್ಟೆ



ದಾವಣಗೆರೆ ಉತ್ತರದ ಎಂ.ಸಿ.ಸಿ. ಬಿ.ಬ್ಲಾಕ್‌ನಲ್ಲಿನ ಸಖಿ ಮತಗಟ್ಟೆ

# ಸಾಂಪ್ರದಾಯಿಕ, ಧ್ಯೇಯ, ಸಖಿ, ಯುವ, ವಿಶೇಷಚೇತನರ ಮತಗಟ್ಟೆಗಳು

**(1ನೇ ಪುಟದಿಂದ)** ವೀಕ್ಷಣೆ ಮಾಡಿ ಸಿದ್ದತೆಗಳ ಪರಿಶೀಲನೆ ನಡೆಸಿದರು.

**ವಿಶೇಷ ಮತಗಟ್ಟೆಗಳ ವಿವರ :**

ಜಗಳೂರು ತಾಲ್ಲೂಕಿನ ಮುಸ್ಟೂರು 238ನೇ ಮತಗಟ್ಟೆಯಲ್ಲಿ ಧ್ಯೇಯ ಮಾದರಿ ಜಲಾನಯನ ಪ್ರಾತ್ಯಕ್ಷಿತೆ, ಮಳೆ ನೀರು ಸಂರಕ್ಷಣೆ ಮಾಡುವ ಬಗ್ಗೆ ವಿವರಿಸಲಾಗಿದೆ.

ದಾವಣಗೆರೆ ದಕ್ಷಿಣದ ಮತಗಟ್ಟೆ 139ರಲ್ಲಿ ಜಯದೇವ ಹಾಸ್ಟೆಲ್, ಹನಗೋಡಿಮಠ ನರ್ಸರಿ ಮತ್ತು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೃಷಿ ಆಧಾರಿತ ಮತಗಟ್ಟೆ ಸ್ಥಾಪಿಸಲಾಗಿದೆ. ಇಲ್ಲಿ ಮೆಕ್ಕೆಜೋಳದ ಸ್ವಾಗತದ ಕಮಾನು ನಿರ್ಮಾಣ, ಕೃಷಿ ಮಾಹಿತಿಯುಳ್ಳ ಫಲಕಗಳ ಅನಾವರಣ ಮಾಡಲಾಗಿದೆ.

ಹೊನ್ನಾಳಿ ತಾಲ್ಲೂಕಿನ ಆಂಜನೇಯಪುರದಲ್ಲಿ ಲಂಬಾಣಿ ಸಾಂಪ್ರದಾಯಿಕ ಮತಗಟ್ಟೆ, ಚನ್ನಗಿರಿ ತಾಲ್ಲೂಕಿನ ಅಸ್ತಾಪನಹಳ್ಳಿಯಲ್ಲಿ ಹಕ್ಕಿಪಿಕ್ಕಿ ಜನಾಂಗದ ಮತಗಟ್ಟೆ, ದಾವಣಗೆರೆ ನಗರದ ನೀರಾವರಿ ಇಲಾಖೆ ಮತಗಟ್ಟೆ 201ರಲ್ಲಿ ಸಂಚಾರಿ ನಿಯಮಗಳ ಜಾಗೃತಿಯುಳ್ಳ ಮತಗಟ್ಟೆ, ಹರಿಹರದಲ್ಲಿ ವೀಳ್ಯೆದೆಲೆ, ಚನ್ನಗಿರಿ ಪಟ್ಟಣದಲ್ಲಿ ಅಡಿಕೆ ಬೆಳೆ ಕುರಿತಂತೆ ಮತಗಟ್ಟೆಗಳನ್ನು ವಿಶೇಷವಾಗಿ ಸಿದ್ದಪಡಿಸಲಾಗಿದೆ.

## ವೇಷಭೂಷಣ, ರಂಗೋಲಿ, ಭಜನಾ ಸ್ಪರ್ಧೆ

ಚಿತ್ರದುರ್ಗ, ಮೇ 6- ನಗರದ ಮುರುಘರಾಜೇಂದ್ರ ಬೃಹನ್ಮಠದಲ್ಲಿ ನಾಡಿದ್ದು ದಿನಾಂಕ 8ರಿಂದ 10ರ ವರೆಗೆ ಬಸವೇಶ್ವರ ಜಯಂತಿ ಕಾರ್ಯಕ್ರಮ ನಡೆಯಲಿದೆ. 9ರ ಬೆಳಗ್ಗೆ 10ಕ್ಕೆ ವಚನ ಕಂಠಪಾಠ, ಶರಣರ ವೇಷಭೂಷಣ, ರಂಗೋಲಿ ಹಾಗೂ ಬಸವಾದಿ ಶಿವ ಶರಣರ ಕುರಿತಾದ ಭಜನಾ ಸ್ಪರ್ಧೆ ಏರ್ಪಡಿಸಲಾಗಿದೆ. ಸಂಪರ್ಕಿಸಿ : 9901124515, 7846033315.


Property Hub
• EC
• E-swathu
• Building Licence
• Khatha Change
96118 66449

ಕರ್ನಾಟಕ ಮುಕ್ತ ವಿದ್ಯಾಲಯ (KOS)
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

ಸೈಟುಗಳು ಮಾರಾಟಕ್ಕಿವೆ
KHB ಕಾಲೋನಿ ( Judge quatres ಹತ್ತಿರ) ಪೂರ್ವ 50x80, ಪಶ್ಚಿಮ 30x50 (ಎರಡು Circle ಹತ್ತಿರ) ಜೆ.ಹೆಚ್. ಪಟೇಲ್ ಬಡಾವಣೆ (ಪೋದಾರ್ ಸ್ಕೂಲ್ ಎದುರು) ಪೂರ್ವ 20x30 (ಒಟ್ಟು 3 ಸೈಟುಗಳು)
ಐಗೂರು ವಿಜಯಕುಮಾರ
99457 02495

ಬೇಕಾಗಿದ್ದಾರೆ
ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ.
ಸಂಜೆ 6 ರಿಂದ 12ರವರೆಗೆ
ಭೇಟಿ ಸಮಯ : ಬೆ. 11.30 ರಿಂದ ಸಂ. 5.00
08192 254736

ಸ್ಪೋಕನ್ ಇಂಗ್ಲಿಷ್
100% ಅತ್ಯುತ್ತಮ ಫಲಿತಾಂಶ
ಟ್ಯೂಷನ್ ಕನ್ನಡ, ಹಿಂದಿ, ವೇದಿಕ್ ಮ್ಯಾಥ್ಸ್, ಹ್ಯಾಂಡ್‌ರೈಟಿಂಗ್
ಮಿರಜ್‌ಕರ್ ಟ್ಯುಟೋರಿಯಲ್
ಮೊ. : 90369 96243

ಬೇಕಾಗಿದ್ದಾರೆ
ಡ್ರೈವಿಂಗ್ ಸ್ಕೂಲ್‌ಗೆ ಡ್ರೈವರ್ ಹಾಗೂ ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ.
95359 40975

ಹೆಸರು ಸ್ಪಷ್ಟೀಕರಣ
ನಾನು ಶ್ರೀಮತಿ ಸಾಯಿಕೀರ್ತಿ ವಿ. ಕೋಂ ವರುಣ್ ಕುಮಾರ್ ವಿ.ಎಸ್. 23 ವರ್ಷ, #3992/117, 16ನೇ ಕ್ರಾಸ್, ಸಂಜೀವಿನಿ ನರ್ಸಿಂಗ್ ಕಾಲೇಜ್ ಹತ್ತಿರ, ದಾವಣಗೆರೆ ವಾಸಿಯಾದ ನಾನು ನನ್ನ ಹೆಸರು ಎಸ್. ಎಸ್. ಎಲ್.ಸಿ. ಅಂಕಪಟ್ಟಿಯಲ್ಲಿ ಸಾಯಿಕೀರ್ತಿ ವಿ. D/o ವೆಂಕಟೇಶ್ವರಲು ಪಿ. ಎಂದಿದ್ದು, ಆಧಾರ್ ಕಾರ್ಡಿನ್‌ನಲ್ಲಿ ಶ್ರೀಮತಿ ಸಾಯಿಕೀರ್ತಿ ವಿ. ಕೇರಾಫ್ ವರುಣ್ ಕುಮಾರ್ ವಿ.ಎಸ್. ಎಂದು ನಮೂದಾಗಿದೆ. ಆದ್ದರಿಂದ ಈ ಮೇಲ್ಕಂಡ ಎರಡೂ ಹೆಸರುಗಳು ನನ್ನದೇ ಆಗಿದ್ದು. ಇನ್ನೂ ಮುಂದೆ ನನ್ನ ಎಲ್ಲಾ ವ್ಯವಹಾರಗಳು ಹಾಗೂ ದಾಖಲೆಗಳು ಸಾಯಿಕೀರ್ತಿ ವಿ. ಕೋಂ. ವರುಣ್‌ಕುಮಾರ್ ವಿ.ಎಸ್. ಎಂಬ ಹೆಸರಿನಲ್ಲಿ ಮುಂದುವರೆಯುತ್ತೇನೆಂದು ದಿ. : 6.5.2024 ರಂದು ನೋಟರಿ ದಾವಣಗೆರೆಯವರ ಮುಂದೆ ಪ್ರಮಾಣ ಮಾಡಿದ್ದೇನೆ. - ಸಹಿ/- ಸಾಯಿಕೀರ್ತಿ ವಿ.

ಶಾಕಿರ ಬ್ಯೂಟಿ ಪಾರ್ಲರ್
SHAKIRA BEAUTY PARLER
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿಷಿಯನ್ (Beauticians) - 3
ಸಹಾಯಕರು (Helpers) - 3
# 741/4, 10th main, P.J. Extension, Davanagere.
Contact : 93420 19013

ಬೇಕಾಗಿದ್ದಾರೆ
ಟೆಕ್ನೀಷಿಯನ್ ಕೆಲಸಕ್ಕೆ ಬೇಕಾಗಿದ್ದಾರೆ.
ಹುಡುಗರು ಬೇಕಾಗಿದ್ದಾರೆ.
ಸಂಬಳ 6000/-8000
63601 52755

ಬೇಕಾಗಿದ್ದಾರೆ.
ಸೂಪರ್ ಮಾರ್ಕೆಟ್‌ನಲ್ಲಿ ಹೆಲ್ಪರ್ ಕೆಲಸಕ್ಕೆ, ಯುವಕರು ಬೇಕಾಗಿದ್ದಾರೆ.
S & S MART
ಹೈಟೆಕ್ ಹಾಸ್ಪಿಟಲ್ ರಸ್ತೆ, ದಾವಣಗೆರೆ.
ಮೊ: 7411399485

ಮನೆ ಮಾರಾಟಕ್ಕಿದೆ
3 ಮಳಿಗೆ, 2 BHK, ಗ್ರೌಂಡ್, 1ನೇ ಮಹಡಿ, 2 BHK, 1 BHK 12 ಚದರಡಿವುಳ್ಳ, ಬೋರ್‌ವೆಲ್ ಇರುವ ಮನೆ ಮಾರಾಟಕ್ಕಿದೆ. ಆಸಕ್ತರು ಕರೆ ಮಾಡಬಹುದು
70192 17786, 70191 08442

ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ಬೇಕಾಗಿದ್ದಾರೆ
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮತ್ತು ಡಿಗ್ರಿ ಆದ ಹುಡುಗರು ಬೇಕಾಗಿದ್ದಾರೆ.
M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43 ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

ಬೇಕಾಗಿದ್ದಾರೆ
ಅನುಭವಿ ಚಾಲಕ ಮತ್ತು ಸಹಾಯಕ ಹೆಂಗಸರು ಪ್ಯಾಕಿಂಗ್ ಮಾಡಲು ಹೆಸರಾಂತ ಕಂಪನಿಗೆ ಅಗತ್ಯವಿದೆ.
ಕೈಗಾರಿಕಾ ಪ್ರದೇಶ, ಲೋಕಿಕೆರೆ ರಸ್ತೆ, ದಾವಣಗೆರೆ. ವಾಟ್ಸಾಪ್ ರೆಸ್ಯೂಮ್ ಕಳುಹಿಸಿ ಈ ನಂಬರಿಗೆ ಕರೆ ಮಾಡಿ.
99863 66358

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

ಬೇಕಾಗಿದ್ದಾರೆ
ಶುಭಂ ಫುಡ್ಸ್ ರೈಸ್ ಮಿಲ್, ಬಾಡ
ರೈಸ್‌ಮಿಲ್‌ನಲ್ಲಿ ಅಕೌಂಟೆಂಟ್ ಕೆಲಸ ಮಾಡಲು ಬಿ.ಕಾಂ. ಪದವೀಧರರು ಬೇಕಾಗಿದ್ದಾರೆ. ಸಂಪೂರ್ಣ ಕಂಪ್ಯೂಟರ್ ಮಾಹಿತಿ ಮತ್ತು ಟ್ಯಾಲಿ ಅನುಭವವಿರಬೇಕು, ಇ.ಎಸ್.ಐ., ಪಿಎಫ್, ಊಟ, ವಸತಿ ಸೌಲಭ್ಯವಿರುತ್ತದೆ. ಆಕರ್ಷಕ ವೇತನ ಇರುತ್ತದೆ. ಆಸಕ್ತರು ದಾಖಲಾತಿಗಳೊಂದಿಗೆ ಸಂದರ್ಶಿಸುವ ದಿ.: 8 ಮತ್ತು 9ನೇ ಮೇ 2024, ಸಮಯ : ಬೆ. 10 ರಿಂದ ಮ. 3ರವರೆಗೆ.
95919 72869, 99722 22663

WANTED
Accountants - 2
(3-5 Years Experience)
Contact :
98441 20003
Shamanur Sugars Ltd.,
374, 4th main, P.J. Extn., Davangere

ಪ್ರವೇಶ ಪ್ರಕಟಣೆ
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

ಬೇಕಾಗಿದ್ದಾರೆ
ಕಿರಾಣಿ ಅಂಗಡಿಗೆ ಕೆಲಸಗಾರರು ಬೇಕಾಗಿದ್ದಾರೆ. ಎರಡರಿಂದ ಮೂರು ವರ್ಷ ಅನುಭವವಿರಬೇಕು.
94495 69627
93525 46144

ಮನೆ ಮತ್ತು ರೂಂ ಬಾಡಿಗೆಗಿದೆ
ಜಯನಗರ, ಎ ಬ್ಲಾಕ್‌ನಲ್ಲಿ 15x40 ವಿಸ್ತೀರ್ಣದ ಸಿಂಗಲ್ ಹಾಗೂ ಡಬಲ್ ಬೆಡ್ ರೂಂ ಹಾಗೂ 15x15 ವಿಸ್ತೀರ್ಣದ ಫರ್ನೀಚರ್ ಸೌಲಭ್ಯದ ರೂಂ ಬಾಡಿಗೆಗೆ ದೊರೆಯುತ್ತದೆ.
94484 39639

ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

SITE FOR RENT/LEASE
80x50 (4000sq feet)
Location: Industrial area, Near NH 4 Davangere.
99022 75853 (Kiran H B)
98452 40951 (Basavaraja H K)

ಶ್ರೀ ರಾಘುವೇಂದ್ರ ಜ್ಯೋತಿಷ್ಯಾಲಯ
No. 1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಮದುವೆ ವಿಳಂಬ, ದಾಂಪತ್ಯ ಸ್ತ್ರೀ-ಪುರುಷ ವಶೀಕರಣ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಶತಃ ಸಿದ್ದ.
(ಮನೆ) ಜಿ. ವಿ. ಭಟ್ಟರ್
2ನೇ ಹಂತ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ
89716 99826

ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ
ಸಂಪರ್ಕಿಸಿ :
ಪ್ರಕಾಶ್ ಟಿ.ವಿ. ಸೆಂಟರ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

SSLC/PUC ನೇರ ಪರೀಕ್ಷೆಗೆ ಅರ್ಜಿ
Science/Arts/ Commerce
ಶಾಲೆ ಬಿಟ್ಟಿದ್ದೀರಾ? ಕರ್ನಾಟಕ ಮುಕ್ತ ವಿದ್ಯಾಲಯ (KOS)
PUC Science ಪಾಸಾದವರು ಇಂಜಿನಿಯರಿಂಗ್, ನರ್ಸಿಂಗ್, ಫಾರ್ಮಸಿ, ಪ್ಯಾರಾಮೆಡಿಕಲ್, ಡಿಗ್ರಿ ಸೇರಬಹುದು.
(ಉನ್ನತ ಶಿಕ್ಷಣ/ಸರ್ಕಾರಿ ಉದ್ಯೋಗ/ಮುಂಬಡ್ತಿಗೆ ಅವಕಾಶ)
S.N. Public School B1- ಹೊಸ RTO ಆಫೀಸ್ ಎದುರು, ದಾವಣಗೆರೆ. B2- ಜೀಜಾಮಾತಾ ಕಾಲೋನಿ,ಹರಿಹರ.
97417 46205, 83105 16354
ವಿ.ಸೂ : ಫೀಯನ್ನು ಕಂತಿನಲ್ಲಿ ಕಟ್ಟಬಹುದು.

ಬೇಕಾಗಿದ್ದಾರೆ
ಅಂಗಡಿಯಲ್ಲಿ ಕೆಲಸ ಮಾಡಲು 20-35 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
ಪ್ರಕಾಶ್ ಟಿ.ವಿ. ಸೆಂಟರ್
ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

# ಮತದಾನ ಜಾಗೃತಿಗಾಗಿ ಸಿದ್ಧಗಂಗಾ ವಿದ್ಯಾರ್ಥಿಗಳ 'ಕೈ ಗೊಂಬೆ' ಆಟ



ದಾವಣಗೆರೆ, ಮೇ 6- ನಾಳೆ ದಿನಾಂಕ 7ರಂದು ಲೋಕಸಭೆ ಚುನಾವಣೆ ನಡೆಯಲಿದ್ದು, ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ಅವರ ನಾಯಕತ್ವದಲ್ಲಿ ಮತ್ತು ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಡಾ. ಸುರೇಶ್ ಬಿ. ಇಟ್ನಾಳ್ ಅವರ ಮಾರ್ಗದರ್ಶನದಲ್ಲಿ ಮತದಾನ ಜಾಗೃತಿಗಾಗಿ ಹಲವಾರು ವಿನೂತನ ಕಾರ್ಯಕ್ರಮಗಳು ನಡೆದಿವೆ.


ಅವುಗಳಲ್ಲಿ 'ಬನ್ನಿ ಮತ ಹಾಕೋಣ' ಎಂಬ ಹೆಸರಿನ ಕೈ ಗೊಂಬೆಯಾಟ (ಪಪೆಟ್ ಶೋ) ಕೂಡಾ ಒಂದು. ವಿನೂತನ ಮತ್ತು ಕ್ರಿಯಾಶೀಲವಾಗಿ ಈ ಪಪೆಟ್ ಶೋ ಮೂಡಿ ಬಂದಿದೆ. ಹೋಟೆಲ್‌ನಲ್ಲಿ ಅದರ ಮಾಲೀಕ ರಾಮಣ್ಣ, ಗ್ರಾಹಕ ಭೀಮಣ್ಣ, ನಿವೃತ್ತ ಮುಖ್ಯೋಪಾಧ್ಯಾಯ ಶಿವಣ್ಣ ಇವರೊಂದಿಗೆ ಹೋಟೆಲ್‌ಗೆ ಬರುವ ತಾಯಿ ಮತ್ತು ಮಗಳು ಹೀಗೆ ಐವರ ನಡುವೆ ನಡೆಯುವ ಸರಳ ಸಂಭಾಷಣೆಯಲ್ಲಿ ಮತದಾನದ ಮಹತ್ವ ಮತ್ತು ಮತದಾನಕ್ಕಾಗಿ ಇರುವ ಅನುಕೂಲತೆಗಳ ಬಗ್ಗೆ ಅರ್ಥಪೂರ್ಣವಾಗಿ ಪ್ರಸ್ತುತಪಡಿಸಲಾಗಿದೆ.

ಒಟ್ಟು 12 ನಿಮಿಷಗಳ ಈ ಪಪೆಟ್ ಶೋ ನ ವಿಡಿಯೋವನ್ನು ಯೂಟ್ಯೂಬ್‌ನಲ್ಲಿ ವೀಕ್ಷಿಸಲು ಲಭ್ಯವಿದ್ದು, ಈಗಾಗಲೇ ಹಲವರು ಅದನ್ನು ವೀಕ್ಷಿಸಿ ಮೆಚ್ಚುಗೆ ಸೂಚಿಸಿದ್ದಾರೆ. ಇದರ ಮುಖ್ಯ ಆಕರ್ಷಣೆಯಾದ ಸುಂದರ ಗೊಂಬೆಗಳನ್ನು ಹೆಸರಾಂತ ಕಲಾವಿದ ನಾ.ರೇವನ್, ಯೋಗಿ ಪ್ರಸನ್ನ ಮತ್ತು ರಮೇಶ್ ಅವರುಗಳು ತಮ್ಮ ಕಲಾನೈಪುಣ್ಯದಿಂದ ರೂಪಿಸಿದ್ದಾರೆ.

ಸಿದ್ಧಗಂಗಾ ವಿದ್ಯಾಸಂಸ್ಥೆ ನಿರ್ದೇಶಕ ಡಾ.ಜಯಂತ್ ಅವರ ಪರಿಕಲ್ಪನೆ ಮತ್ತು ನಿರ್ದೇಶನದಲ್ಲಿ ಇದು ಮೂಡಿಬಂದಿದೆ. ಸಂಭಾಷಣೆಯನ್ನು ಶಿಕ್ಷಕ ಜಗನ್ನಾಥ ನಾಡಿಗೇರ್ ಬರೆದಿದ್ದಾರೆ. ಇವರಿಬ್ಬರೊಂದಿಗೆ ಸಿದ್ಧಗಂಗಾ ವಿದ್ಯಾಸಂಸ್ಥೆಯ ಶಿಕ್ಷಕರಾದ ಮಹೇಶ್, ಶಮಾಬಾನು ಮತ್ತು ಮೀನಾಕ್ಷಿ ಈ ಐವರು ಇದಕ್ಕೆ ಕಂಠದಾನ ಮಾಡಿದ್ದಾರೆ. ಇದರ ವಿಡಿಯೋ ಚಿತ್ರೀಕರಣ ಮತ್ತು ಸಂಕಲನವನ್ನು ಮನುಶ್ರೀ ಅವರು ನಿರ್ವಹಿಸಿದ್ದಾರೆ.

ಸಿದ್ಧಗಂಗಾ ವಿದ್ಯಾರ್ಥಿಗಳಾದ ಶರತ್, ವಿನಯ್‌ಕುಮಾರ್, ಸಲ್ಮಾನ್, ಕಲ್ಲೇಶ್ ಮತ್ತು ದೀಪಕ್ ಅವರುಗಳು ತಮ್ಮ ಕೈಗಳಿಂದ ಈ ಗೊಂಬೆಗಳಿಗೆ ಜೀವ ತುಂಬಿದ್ದಾರೆ. ಇಲ್ಲಿ ಕೊಟ್ಟಿರುವ ಯೂಟ್ಯೂಬ್ ಲಿಂಕನ್ನು ಬಳಸಿ (https://youtu.be/KM3rkQu5nP4?si=BC9bBv3tnMhVkapL) ಸಾರ್ವಜನಿಕರು ಈ ವಿಡಿಯೋವನ್ನು ವೀಕ್ಷಿಸಲು ಮತ್ತು ಅದನ್ನು ಇತರರಿಗೂ ಶೇರ್ ಮಾಡಲು ಕೋರಲಾಗಿದೆ.

# ಬಸವ ಜಯಂತಿ : ನಗರದಲ್ಲಿ ಇಂದು ಪ್ರಭಾತ್‌ಪೇರಿ



ಬಸವ ಜಯಂತ್ಯೋತ್ಸವದ ಪ್ರಯುಕ್ತ ಶ್ರೀ ವಿರಕ್ತ ಮಠ ಮತ್ತು ಲಿಂಗಾಯತ ತರುಣ ಸಂಘ ಇವರ ಜಂಟಿ ಆಶ್ರಯದಲ್ಲಿ ವಿವಿಧ ಬಡಾವಣೆಗಳಲ್ಲಿ ಬಸವ ಪ್ರಭಾತ್ ಪೇರಿ ನಡೆಯುತ್ತಿದ್ದು, ಈ ಪ್ರಭಾತ್ ಪೇರಿಗೆ ಬಸವ ಕಲಾ ಲೋಕ ಪ್ರತಿನಿತ್ಯ ವಚನ ಭಜನೆ ಸಾಥ್ ನೀಡಲಿದೆ.

ಇಂದು ಬೆಳಿಗ್ಗೆ 7 ಗಂಟೆಗೆ ಶ್ರೀ ವಿರಕ್ತ ಮಠದಿಂದ ಆರಂಭಗೊಳ್ಳುವ ಪ್ರಭಾತ್ ಪೇರಿಯು ಮದಕರಿ ನಾಯಕ ವೃತ್ತ, ಭಲವಾದಿ ಕೇರಿಗಳಲ್ಲಿ ಸಂಚರಿಸಲಿದೆ.

ನಾಳೆ ಬುಧವಾರ ಮುಂಜಾನೆ 7 ಗಂಟೆಗೆ ಶ್ರೀ ವಿರಕ್ತ ಮಠದಿಂದ ಆರಂಭಗೊಳ್ಳುವ ಪ್ರಭಾತ್ ಪೇರಿಯು ಮದಕರಿ ನಾಯಕ ವೃತ್ತ, ತಳವಾರ ಕೇರಿ, ಕುರುಬರ ಕೇರಿ, ಬೂದಾಳ್ ರಸ್ತೆ, ಕಾಳಿಕಾದೇವಿ ರಸ್ತೆಯಲ್ಲಿ ಸಂಚರಿಸಲಿದೆ. ನಾಡಿದ್ದು ದಿನಾಂಕ 9ರ ಗುರುವಾರ ಕಾಳಿಕಾದೇವಿ ರಸ್ತೆ, ಆನೆಕೊಂಡ ಪೇಟೆ, ಹಳೇಪೇಟೆ, ಎಸ್.ಕೆ.ಪಿ. ರಸ್ತೆಯಿಂದ ವಿರಕ್ತ ಮಠ ತಲುಪಲಿದೆ.

# ಕನ್ನಡ ಸಾಹಿತ್ಯ ಪರಿಷತ್ತು ಜನಸಾಮಾನ್ಯರ ಪರಿಷತ್ತಾಗಬೇಕು



## ಕನ್ನಡ ಸಾಹಿತ್ಯ ಪರಿಷತ್ತಿನ 110ನೇ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಚಿಂತಕ ಹಾಗೂ ವಿಶ್ರಾಂತ ಉಪನ್ಯಾಸಕ ಜಿ.ಎಸ್.ಸುಭಾಷ್ ಚಂದ್ರ ಬೋಸ್ ಆಶಯ

ದಾವಣಗೆರೆ, ಮೇ 6- 110 ವರ್ಷಗಳ ಭವ್ಯ ಇತಿಹಾಸವಿರುವ ಕನ್ನಡ ಸಾಹಿತ್ಯ ಪರಿಷತ್ತು ಜನಸಾಮಾನ್ಯರ ಪರಿಷತ್ತಾಗಿ ರೂಪುಗೊಳ್ಳಬೇಕು. ಆಗ ಮಾತ್ರ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಉದ್ದೇಶ ಈಡೇರುತ್ತದೆ ಎಂದು ಸಾಂಸ್ಕೃತಿಕ ಚಿಂತಕ ಹಾಗೂ ವಿಶ್ರಾಂತ ಉಪನ್ಯಾಸಕ ಜಿ.ಎಸ್. ಸುಭಾಷ್ ಚಂದ್ರ ಬೋಸ್ ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ನಿನ್ನೆ ಆಯೋಜಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 110ನೇ ಸಂಸ್ಥಾಪನ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಮಾತ್ರವಲ್ಲದೇ ಅನೇಕ ಮಹನೀಯರು, ಅನೇಕ ಹಿರಿಯ ಸಾಹಿತಿಗಳು ಬೆಳೆಸಿದ್ದಾರೆ. 1970ರ ಈಚೆಗೆ ಸಾಹಿತ್ಯ ಪರಿಷತ್ತು ಅತ್ಯಂತ ಬೃಹತ್ತಾಗಿ ಬೆಳೆದಿದೆ. ಅನೇಕ ಸಮ್ಮೇಳನಗಳನ್ನು ನಾಡಿನ ವಿವಿಧ ಸ್ಥಳಗಳಲ್ಲಿ ಆಯೋಜಿಸಿ ಜನರಿಗೆ ಹತ್ತಿರವಾಗಲು ಪ್ರಯತ್ನಿಸಿದೆ. ಆದರೆ, ಜನ ಸಾಮಾನ್ಯರ ಪರಿಷತ್ತಾಗದೇ ಇರುವುದು ಖೇದಕರ ಎಂದರು.

'ಜನಸಾಮಾನ್ಯರತ್ತ ಕನ್ನಡ ಸಾಹಿತ್ಯ ಪರಿಷತ್ತು' ಎನ್ನುವ ವಿಷಯದ ಮೇಲೆ ಹರಪನಹಳ್ಳಿಯ ಎಡಿಬಿಎಫ್‌ಜಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಎ.ಎಂ. ರಾಜಶೇಖರಯ್ಯ ಉಪನ್ಯಾಸ ನೀಡಿ, ಜನಸಾಮಾನ್ಯರತ್ತ ಕನ್ನಡ ಸಾಹಿತ್ಯ ಪರಿಷತ್ತು ಸಾಗಬೇಕಾದರೆ ಅದರ ನಡೆ ಹಳ್ಳಿಗಳ ಕಡೆಗೆ ಇರಬೇಕಾಗುತ್ತದೆ ಎಂದು ಹೇಳಿದರು.

ಪ್ರಸ್ತುತ ಸಾಹಿತ್ಯ ಪರಿಷತ್ತು ಕೋಟಿ ಸದಸ್ಯತ್ವದ ಗುರಿಯನ್ನು ಹೊಂದಿದೆ. ಸದಸ್ಯತ್ವವನ್ನು ಪಡೆದರೆ ಸಾಲದು ತಳಮಟ್ಟದ ಹಾಗೂ ಉದಯೋನ್ಮುಖ ಸಾಹಿತಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವೂ ಆಗಬೇಕು. 'ನೂರು ದೇವರನೆಲ್ಲ ನೂಕಾಚೆ ದೂರ ಭಾರತಾಂಬೆಯೇ ದೇವಿ ನಮಗಿಂದು ಪೂಜಿಸುವ ಬಾರಾ ಬಾರಾ' ಎನ್ನುವ ಕುವೆಂಪು ಅವರ ಕವನದಂತೆ ಯಾವಾಗ ಕನ್ನಡಿಗರು ಭಾರತಾಂಬೆ ಹಾಗೂ ಕನ್ನಡಾಂಬೆ ಭುವನೇಶ್ವರಿಯ ಭಾವಚಿತ್ರವನ್ನು ತಮ್ಮ ಮನೆಯಲ್ಲಿಟ್ಟು ಪೂಜೆ ಮಾಡುವ ದಿನಗಳು ಬರುತ್ತದೆಯೋ ಆಗ ಕನ್ನಡ ಸಾಹಿತ್ಯ ಪರಿಷತ್ತು ಜನಸಾಮಾನ್ಯರತ್ತ ಸಾಗಿದೆ ಎಂದರ್ಥ. ಆ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್ತು ಮುಂದಿನ ದಿನಗಳಲ್ಲಿ ಕೆಲಸ ಮಾಡಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಕೆನರಾ ಬ್ಯಾಂಕ್ ನೌಕರರ ಸಂಘದ ಅಖಿಲ ಭಾರತ ಕಾರ್ಯದರ್ಶಿ ಯಾಗಿ ನೇಮಕಗೊಂಡಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷರೂ ಆಗಿರುವ ಕೆನರಾ ಬ್ಯಾಂಕ್ ಉದ್ಯೋಗಿ ಕೆ.ರಾಘವೇಂದ್ರ ನಾಯರಿ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಅಭಿನಂದಿಸಲಾಯಿತು.

ಸನ್ಮಾನ ಸ್ವೀಕರಿಸಿದ ನಾಯರಿ ಮಾತನಾಡಿ, ಸಂಸ್ಥಾಪನಾ ದಿನವನ್ನು ನಾಡಿನೆಲ್ಲೆಡೆ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಸಾಹಿತ್ಯ ಪರಿಷತ್ತು ಕನ್ನಡ-ಕನ್ನಡಿಗ-ಕರ್ನಾಟಕದೊಂದಿಗೆ ಹೇಗೆ ಭಾವನಾತ್ಮಕವಾಗಿ ಬೆಸೆದುಕೊಂಡಿದೆ ಎನ್ನುವುದರ ಬಗ್ಗೆ ಯುವಜನರಿಗೆ ತಿಳಿಹೇಳುವುದರ ಮೂಲಕ ಅವರನ್ನೂ ಸಾಹಿತ್ಯ ಪರಿಷತ್ತಿನೊಂದಿಗೆ ಬೆರೆಸಬೇಕು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಪರಿಷತ್ತಿನ ಮೂಲ ಆಶಯದಂತೆ ನಮ್ಮ ಜಿಲ್ಲೆಯಲ್ಲಿ ಹಲವಾರು ಬರಹಗಾರರಿಗೆ, ಕವಿಗಳಿಗೆ, ಸಾಹಿತಿಗಳಿಗೆ, ವಾಗ್ಮಿಗಳಿಗೆ, ಕಲಾವಿದರುಗಳಿಗೆ ಅವಕಾಶವನ್ನು ಕಲ್ಪಿಸಿ ಪ್ರೋತ್ಸಾಹಿಸುತ್ತಿದೆ ಎಂದು ತಿಳಿಸಿದರು.

ತಮ್ಮ ಅಧ್ಯಕ್ಷಾವಧಿಯ ಕಳೆದ 30 ತಿಂಗಳುಗಳಲ್ಲಿ 3 ಜಿಲ್ಲಾ ಸಮ್ಮೇಳನಗಳನ್ನು ಹಾಗೂ 6 ತಾಲೂಕು ಸಮ್ಮೇಳನಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆಯೋಜಿಸುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತನ್ನು ಜನ ಸಾಮಾನ್ಯರತ್ತ ಕೊಂಡೊಯ್ಯುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಹಾಗೆಯೇ ಜನರು ಕೂಡಾ ಸಾಹಿತ್ಯ ಪರಿಷತ್ತಿನ ಮೇಲೆ ಪ್ರೀತಿ, ಕಾಳಜಿ ಹಾಗೂ ಗೌರವವನ್ನು ಬೆಳೆಸಿಕೊಂಡು ಪರಿಷತ್ತು ಆಯೋಜಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರೋತ್ಸಾಹಿಸುವ ಕೆಲಸವನ್ನು ಮಾಡಬೇಕು ಎಂದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ಸಂಗೀತ ಶಿಕ್ಷಕ ರೇವಣಸಿದ್ದಪ್ಪ, ವಚನಾಮೃತ ಬಳಗದ ಸಂಸ್ಥಾಪಕರಾದ ಸೌಮ್ಯ ಸತೀಶ್ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪರಿಷತ್ತಿನ ಗೌರವ ಕಾರ್ಯದರ್ಶಿ ರೇವಣ ಸಿದ್ದಪ್ಪ ಅಂಗಡಿ ಕಾರ್ಯಕ್ರಮ ನಿರೂಪಿಸಿದರು. ಗೌರವ ಕಾರ್ಯದರ್ಶಿ ಬಿ.ದಿಳ್ಯಪ್ಪ ಸ್ವಾಗತಿಸಿದರು. ಸಂಘಟನಾ ಕಾರ್ಯದರ್ಶಿ ಸಿ. ಜಿ.ಜಗದೀಶ್ ಕೂಲಂಬಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್ ವಂದಿಸಿದರು.

ಜಿಲ್ಲಾ ಮತ್ತು ತಾಲ್ಲೂಕು ಪರಿಷತ್ತಿನ ಪದಾಧಿಕಾರಿಗಳಾದ ಕೆ.ಎಸ್.ವೀರೇಶ್ ಪ್ರಸಾದ್, ಎನ್.ಎಸ್.ರಾಜು, ಎಸ್.ಎಂ. ಮಲ್ಲಮ್ಮ, ಜ್ಯೋತಿ ಉಪಾಧ್ಯಾಯ, ರುದ್ರಾಕ್ಷಿ ಬಾಯಿ, ಭೈರವೇಶ್ವರ, ನಾಗರಾಜ ಸಿರಿಗೆರೆ, ಪರಮೇಶ್ವರಪ್ಪ ದಾಗಿನಕಟ್ಟೆ, ಬೇತೂರು ಎಂ ಷಡಾಕ್ಷರಪ್ಪ, ಆರ್. ಶಿವಕುಮಾರ್ ಹಾಗೂ ಬ್ಯಾಂಕ್ ನೌಕರರ ಸಂಘದ ವಿಶ್ವನಾಥ್ ಬಿಲ್ಲವ, ಪರಶುರಾಮ, ಹೆಚ್.ಎಸ್.ತಿಪ್ಪೇಸ್ವಾಮಿ, ಜಿ.ರಂಗಸ್ವಾಮಿ, ಅಜಿತ್ ಕುಮಾರ್, ಹೆಚ್.ಸುಗೂರಪ್ಪ, ನಾಗೇಶ್ವರಿ ನಾಯರಿ, ಸಾಕಮ್ಮ ಶ್ರೀಧರ ಪೆರೂರು, ಜ್ಞಾನೇಶ್ವರ ಮಾಳವಾಡೆ, ಅಣ್ಣಪ್ಪ ನಂದಾ, ಸಂಸ್ಕಾರ ಭಾರತಿ ಜಿಲ್ಲಾಧ್ಯಕ್ಷ ಎ. ಮಹಾಲಿಂಗಪ್ಪ, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ.ಪರಮೇಶ್ವರಪ್ಪ, ಜಿಲ್ಲಾ ಸರಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಕೆ.ಶಿವಶಂಕರ್, ಡಾ.ಎಂ.ಕೆ.ಗೌಡ, ಸಿಂಗಾಪುರ ಪರಮೇಶ್ವರಪ್ಪ ಮತ್ತಿತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಆಗಸ್ಟ್‌ನಿಂದ ಬಿಎಸ್ಸೆನ್ನೆಲ್ 4 ಜಿ ಸೇವೆ ಆರಂಭ

ನವದೆಹಲಿ, ಮೇ 6 – ಬರುವ ಆಗಸ್ಟ್ ತಿಂಗಳಿನಿಂದ ಸರ್ಕಾರಿ ಸ್ವಾಮ್ಯದ ಬಿಎಸ್ಸೆನ್ನೆಲ್ 4ಜಿ ಸೇವೆಯನ್ನು ಆರಂಭಿಸಲಿದೆ. ಈ ಸೇವೆಗಾಗಿ ಸರ್ಕಾರದ ಆತ್ಮನಿರ್ಭರ ನೀತಿಯ ಅನ್ವಯ ದೇಶೀಯ ತಂತ್ರಜ್ಞಾನ ಬಳಸಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪ್ರಾಯೋಗಿಕ ಹಂತದಲ್ಲಿ 700 ಹಾಗೂ 2,100 ಮೆಗಾಹರ್ಟ್ಸ್ ಸ್ಪೆಕ್ಟ್ರಮ್ ಮೂಲಕ 40-45 ಎಂ.ಬಿ. ವೇಗದ ಸೇವೆ ಒದಗಿಸಲಾಗಿದೆ ಎಂದು ಬಿ.ಎಸ್.ಎನ್.ಎಲ್. ಅಧಿಕಾರಿಗಳು ಹೇಳಿದ್ದಾರೆ.

ಐ.ಟಿ. ಕಂಪನಿಯಾದ ಟಿ.ಸಿ.ಎಸ್. ಹಾಗೂ ಸರ್ಕಾರಿ ಸ್ವಾಮ್ಯದ ಸಿ-ಡಾಟ್ ನೇತೃತ್ವದ ಒಕ್ಕೂಟ ರೂಪಿಸಿದ್ದ ದೇಶೀಯ ತಂತ್ರಜ್ಞಾನ 4ಜಿ ಸೇವೆಯನ್ನು ಪಂಜಾಬ್‌ನಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗಿದೆ. 8 ಲಕ್ಷ ಚಂದಾದಾರರು ಈ ಸೇವೆಯನ್ನು ಬಳಸುತ್ತಿದ್ದಾರೆ. ಪಂಜಾಬ್‌ನಲ್ಲಿ ಬಿಎಸ್ಸೆನ್ನೆಲ್ ನೆಟ್‌ವರ್ಕ್ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಸಂಕೀರ್ಣ ತಂತ್ರಜ್ಞಾನದಲ್ಲಿ ಯಶಸ್ಸು ಕಾಣಲು 12 ತಿಂಗಳು ಬೇಕಾಯಿತು. ಆಗಸ್ಟ್ ತಿಂಗಳಲ್ಲಿ ಬಿಎಸ್ಸೆನ್ನೆಲ್ ದೇಶಾದ್ಯಂತ 4ಜಿ ಸೇವೆ ಒದಗಿಸಲಾಗುವುದು ಎಂದು ಬಿಎಸ್ಸೆನ್ನೆಲ್ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಬಿಎಸ್ಸೆನ್ನೆಲ್ ದೇಶಾದ್ಯಂತ 1.12 ಲಕ್ಷ 4ಜಿ ಹಾಗೂ 5ಜಿ ಸೇವಾ ಸ್ಥಾವರಗಳನ್ನು ಸ್ಥಾಪಿಸುತ್ತಿದೆ.

## ಮೂರು ಗಂಟೆಗಳಲ್ಲೇ ನಕಲಿ ಮಾಹಿತಿ ತೆಗೆದು ಹಾಕಲು ಪಕ್ಷಗಳಿಗೆ ಸೂಚನೆ

ನವದೆಹಲಿ, ಮೇ 6 – ರಾಜಕೀಯ ಪಕ್ಷಗಳ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ನಕಲಿ ಅಂಶಗಳಿರುವ ಬಗ್ಗೆ ಮಾಹಿತಿ ನೀಡಿದ ಮೂರು ಗಂಟೆಗಳಲ್ಲೇ ಅವುಗಳನ್ನು ಕಿತ್ತು ಹಾಕಬೇಕು ಎಂದು ಚುನಾವಣಾ ಆಯೋಗ ತಿಳಿಸಿದೆ. ಚುನಾವಣಾ ಸಮಯದಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆಯ ಕುರಿತು ಚುನಾವಣಾ ಆಯೋಗ ನಿರ್ದೇಶನಗಳನ್ನು ನೀಡಿದ್ದು, ಅದರಲ್ಲಿ ಈ ಅಂಶ ತಿಳಿಸಲಾಗಿದೆ.

ಇತ್ತೀಚೆಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ನಟರಾದ ಅಮೀರ್ ಖಾನ್ ಮತ್ತು ರಣವೀರ್ ಸಿಂಗ್ ಸೇರಿದಂತೆ ಹಲವರ ನಕಲಿ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಕೃತಕ ಬುದ್ಧಿವಂತಿಕೆಯಂತಹ ತಂತ್ರಜ್ಞಾನ ಬಳಸಿಕೊಂಡು ನಕಲಿ ವಿಡಿಯೋ ಮಾಡುವಂತಹ ಹಾಗೂ ಅಪಪ್ರಚಾರ ನಡೆಸುವಂತಹ ಕೃತ್ಯಗಳಿಂದ ದೂರವಿರುವಂತೆಯೂ ಚುನಾವಣಾ ಆಯೋಗ ಹೇಳಿದೆ.

# ಮಲೇಬೆನ್ನೂರಿನಲ್ಲಿ ಸಖಿ ಮತಗಟ್ಟೆ ಸ್ಥಾಪನೆ

## ಮತಗಟ್ಟೆಗಳಲ್ಲಿ ಮತದಾರರಿಗೆ ಅಗತ್ಯ ಸೌಲಭ್ಯ : ಎ.ಸುರೇಶ್



ಮಲೇಬೆನ್ನೂರು, ಮೇ 6- ರಾಜ್ಯದಲ್ಲಿ 2ನೇ ಹಂತದ ಲೋಕಸಭಾ ಚುನಾವಣೆ ನಾಳೆ ದಿನಾಂಕ 7 ರಂದು ಜರುಗಲಿದ್ದು, ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮತದಾನಕ್ಕೆ ಮತಗಟ್ಟೆಗಳು ಸಕಲ ರೀತಿಯಲ್ಲೂ ಸಜ್ಜಾಗಿ ಮತದಾರರನ್ನು ಸ್ವಾಗತಿಸುತ್ತಿವೆ.

ಮಲೇಬೆನ್ನೂರು ಪುರಸಭೆ ವ್ಯಾಪ್ತಿಯಲ್ಲಿ 21 ಮತಗಟ್ಟೆಗಳಿದ್ದು, ಈ ಪೈಕಿ ಜಿಬಿಎಂಎಸ್ ಶಾಲೆಯಲ್ಲಿರುವ ಮತಗಟ್ಟೆಯನ್ನು ಈ ಬಾರಿ ಸಖಿ ಮತಗಟ್ಟೆಯನ್ನಾಗಿ ಮಾಡಲಾಗಿದೆ.

ಮಹಿಳೆಯರಲ್ಲಿ ಮತದಾನದ ಜಾಗೃತಿ ಮತ್ತು ಮಹಿಳಾ ಮತದಾನ ಪ್ರಮಾಣವನ್ನು ಹೆಚ್ಚಿಸುವ ದೃಷ್ಟಿಯಲ್ಲಿ ಈ ಸಖಿ ಮತಗಟ್ಟೆಗಳನ್ನು ತೆರೆಯಲಾಗಿದ್ದು, ಪಿಂಕ್ ಬಣ್ಣದಿಂದ ಕೂಡಿರುವ ಈ ಮತಗಟ್ಟೆಯನ್ನು ನವ ವಧುವಿನಂತೆ ಸಿಂಗಾರ ಮಾಡಲಾಗಿದೆ.

ಈ ಮತಗಟ್ಟೆಯಲ್ಲಿ 580 ಮಹಿಳಾ ಮತದಾರರು ಮತ್ತು 520 ಪುರುಷ ಮತದಾರರಿದ್ದಾರೆ. ಅಲ್ಲದೇ, ಈ ಮತಗಟ್ಟೆಯಲ್ಲಿ ಕಾರ್ಯನಿರ್ವಹಿಸುವ ಚುನಾವಣಾ ಸಿಬ್ಬಂದಿಗಳೂ ಕೂಡಾ ಮಹಿಳೆಯರೇ ಆಗಿರುತ್ತಾರೆ.

ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಪಟ್ಟಣದ 12 ಮತಗಟ್ಟೆಗಳ ಆವರಣದಲ್ಲಿ ಮತದಾರರ ಅನುಕೂಲಕ್ಕಾಗಿ ಶಾಮಿಯಾನ ಹಾಕಿಸಲಾಗಿದ್ದು, ಎಲ್ಲಾ ಮತಗಟ್ಟೆಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ವಿಶೇಷ ಚೇತನರಿಗೆ ಗಾಲಿ ಕುರ್ಚಿ ಸೌಲಭ್ಯವನ್ನೂ ಕಲ್ಪಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ಅವರು ಪತ್ರಕರ್ತರಿಗೆ ತಿಳಿಸಿದರು.

ಮತಗಟ್ಟೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಊಟ, ಉಪಹಾರ, ಟೀ ವ್ಯವಸ್ಥೆಯನ್ನು ಮೆನು ಪ್ರಕಾರ ಮಾಡಲಾಗುವುದೆಂದರು. ಮಲೇಬೆನ್ನೂರು ಪುರಸಭೆ ವ್ಯಾಪ್ತಿಯಲ್ಲಿ ಒಟ್ಟು 18,669 ಮತದಾರರಿದ್ದಾರೆ.

ಕುಂಬಳೂರಿನಲ್ಲಿ ಈ ಬಾರಿ ಸಖಿ ಮತಗಟ್ಟೆಯನ್ನು ಸಿದ್ದಪಡಿಸಿದ್ದು, ಮತದಾರ ರನ್ನು ಆಕರ್ಷಿಸುತ್ತಿದೆ. ಬಹು ತೇಕ ಎಲ್ಲಾ ಕಡೆ ಮತಗಟ್ಟೆ ಆವರಣದಲ್ಲಿ ಶಾಮಿಯಾನ ಹಾಕಿದ್ದು, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

**ಭದ್ರತೆ :** ಚುನಾವಣೆ ಸಂದರ್ಭದಲ್ಲಿ ಶಾಂತಿ - ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಎಲ್ಲಾ ಮತಗಟ್ಟೆಗಳಿಗೆ ಪೊಲೀಸ್ ಹಾಗೂ ಮೀಸಲು ಪಡೆ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಪಿಎಸ್‌ಐ ಪ್ರಭು ಕೆಳಗಿನಮನೆ ತಿಳಿಸಿದ್ದಾರೆ.

# ಹರಪನಹಳ್ಳಿ : 253 ಮತಗಟ್ಟೆಗಳಿಗೆ ತೆರಳಿದ ಸಿಬ್ಬಂದಿ



ಹರಪನಹಳ್ಳಿ,ಮೇ 6- ದಾವಣಗೆರೆ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಹರಪನಹಳ್ಳಿ ತಾಲೂಕಿನ 253 ಮತಗಟ್ಟೆಗಳಿಗೆ , ಅಧಿಕಾರಿಗಳು ಹೆಚ್ ಪಿ ಎಸ್ ಕಾಲೇಜಿನಿಂದ ವಿವಿ ಪ್ಯಾಟ್ ಹಾಗೂ ಇವಿಎಮ್ ಮತ ಯಂತ್ರಗಳೊಂದಿಗೆ ಬಸ್ ಮೂಲಕ ತೆರಳಿದರು. ಅಧಿಕಾರಿಗಳು ತಮ್ಮ ಸಿಬ್ಬಂದಿಯೊಂದಿಗೆ ನಿಯೋಜಿತ ಕೇಂದ್ರಗಳಿಗೆ ತೆರಳುವಾಗ ಬಿಸಿಲ ತಾಪಕ್ಕೆ ಕಂಪಾರ್ಟ್‌ಮೆಂಟ್ ಬೋರ್ಡ್‌ಗಳನ್ನೇ ತಲೆಗೆ ಆಸರೆಯಾಗಿಸಿಕೊಂಡು ತೆರಳಿದ್ದು ಕಂಡುಬಂದಿತು.

ಈ ವೇಳೆ ಎಆರ್‌ಓ ಚಿದಾನಂದ ಗುರು ಸಿದ್ದಪ್ಪ, ತಹಶೀಲ್ದಾರ್ ಗಿರೀಶ್ ಬಾಬು, ಇಓ ಚಂದ್ರಶೇಖರ್, ಪುರಸಭಾ ಮುಖ್ಯಾಧಿಕಾರಿ ಶಿವಕುಮಾರ ಎರಗುಡಿ ಇತರರು ಇದ್ದರು

# ತಾಪಮಾನ : ಮುನಿಸಿಪಲ್ ಕಾರ್ಮಿಕರ ಕೆಲಸದ ಅವಧಿ ಕಡಿತಕ್ಕೆ ಒತ್ತಾಯ

ದಾವಣಗೆರೆ, ಮೇ 6- ಹೆಚ್ಚಿರುವ ತಾಪಮಾನ ಜನರ ಆರೋಗ್ಯದ ಮೇಲೆ ಸಾಕಷ್ಟು ಅಡ್ಡ ಪರಿಣಾಮ ಉಂಟು ಮಾಡುತ್ತಿದ್ದು, ರಾಜ್ಯದ ಮಹಾನಗರ, ನಗರ, ಪಟ್ಟಣಗಳಲ್ಲಿ ನಾಗರಿಕ ಸೌಲಭ್ಯಗಳನ್ನು ಒದಗಿಸುವ ಮುನಿಸಿಪಲ್ ಕಾರ್ಮಿಕರು, ಪೌರಕಾರ್ಮಿಕರು, ಕಸ ಸಾಗಾಣಿಕೆ ಮತ್ತಿತರರ ಕೆಲಸದ ಅವಧಿಯನ್ನು ಬದಲಿಸುವಂತೆ ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘವು ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸಿದೆ. ಬೆಳಿಗ್ಗೆ 10 ಗಂಟೆ ನಂತರ ಕೆಲಸ ಮಾಡುವುದು ಅಸಾಧ್ಯವಾಗಿದೆ. ಅಲ್ಲದೇ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ದೈಹಿಕ ಶ್ರಮವಹಿಸಿ ಹೊರಗಡೆ ದುಡಿವ ಎಲ್ಲಾ ಮುನಿಸಿಪಲ್ ಕಾರ್ಮಿಕರಿಗೆ ಬೆಳಿಗ್ಗೆ 6 ರಿಂದ 10 ಗಂಟೆ ತನಕ ಮಾತ್ರ ಕೆಲಸ ನಿಗದಿಪಡಿಸುವಂತೆ ಒತ್ತಾಯಿಸಿದೆ ಎಂದು ಸಂಘದ ಜಿಲ್ಲಾ ಸಂಚಾಲಕ ಕೆ.ಹೆಚ್.ಆನಂದರಾಜು ತಿಳಿಸಿದ್ದಾರೆ.

# ನಗರದ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಅಮಾವಾಸ್ಯೆ ಪೂಜೆ



ದಾವಣಗೆರೆ, ಮೇ 6- ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಅಕ್ಷಯ ತದಿಗೆ ಅಮಾವಾಸ್ಯೆ ಪ್ರಯುಕ್ತ ನಾಳೆ ದಿನಾಂಕ 8ರ ಬುಧವಾರ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಹಾ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

ಶ್ರೀ ವಿನಾಯಕ ಸೇವಾ ಸಮಿತಿಯವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ನಗರದಲ್ಲಿ ಇಂದು ಮತದಾನ ಜಾಗೃತಿ ವೈದ್ಯಕೀಯ ಶಿಬಿರ

ಯುನಿಟಿ ಹೆಲ್ತ್ ಸೆಂಟರ್‌ನಲ್ಲಿ ಮತದಾನ ಜಾಗೃತಿ ವೈದ್ಯಕೀಯ ಶಿಬಿರವನ್ನು ಇಂದು ಹಮ್ಮಿಕೊಳ್ಳಲಾಗಿದೆ.

ಮತದಾನ ಮಾಡಿ ಬೆರಳಿನ ಶಾಹಿ ಗುರುತನ್ನು ತೋರಿಸಿದವರಿಗೆ ವೈದ್ಯಕೀಯ ಒ.ಪಿ.ಡಿ. (ಹೊರ ರೋಗಿಗಳಿಗೆ) ರೂ. 50, ಲ್ಯಾಬೋರೇಟರಿ ಪರೀಕ್ಷೆಗಳಿಗೆ ಶೇ. 50 ರಿಯಾಯತಿ, ಇ.ಸಿ.ಜಿ. ರೂ. 50, ಅಲ್ಟ್ರಾಸೌಂಡ್ ಶೇ. 10 ರಿಯಾಯತಿ, ಎಂ.ಆರ್.ಐ ಮತ್ತು ಸಿ.ಟಿ. ಸ್ಕ್ಯಾನ್ ಶೇ. 10 ರಿಯಾಯತಿಯಲ್ಲಿ ಮೊದಲು ಬಂದ 100 ರೋಗಿಗಳಿಗೆ ಕೊಡಲಾಗುವುದು.

# ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗೆ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭೇಟಿ, ಗೌರವ



ದಾವಣಗೆರೆ, ಮೇ 6- ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು ಮೊನ್ನೆ ನಗರಕ್ಕಾಗಮಿಸಿದ್ದ ಮೈಸೂರು ರಾಜವಂಶದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನಗರದ ಪ್ರತಿಷ್ಠಿತ ಬ್ಯಾಂಕುಗಳಲ್ಲೊಂದಾದ ದಾವಣಗೆರೆ - ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಭೇಟಿ ನೀಡಿದ್ದರು.

ಬ್ಯಾಂಕಿನ ಅಧ್ಯಕ್ಷ ಎನ್.ಎ. ಮುರುಗೇಶ್ ಅವರು ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಬರ ಮಾಡಿಕೊಂಡು ಸನ್ಮಾನಿಸಿ, ಗೌರವಿಸಿದರು. ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ಉಪಸ್ಥಿತರಿದ್ದರು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಜಯಮ್ಮ ಪರಶುರಾಮಪ್ಪ, ವ್ಯವಸ್ಥಾಪನಾ ಮಂಡಲಿಯ ಅಧ್ಯಕ್ಷರೂ ಆಗಿರುವ ನಿರ್ದೇಶಕ ಎ.ಹೆಚ್. ಕುಬೇರಪ್ಪ, ನಿರ್ದೇಶಕರುಗಳಾದ ಕಿರುವಾಡಿ ವಿ. ಸೋಮಶೇಖರ್, ಶಂಕರ್ ಖಟಾವ್‌ಕರ್, ಎಸ್. ಕೆ. ಪ್ರಭು ಪ್ರಸಾದ್, ಕೆ.ಎಂ. ಜ್ಯೋತಿ ಪ್ರಕಾಶ್, ಪಿ.ಹೆಚ್. ವೆಂಕಪ್ಪ, ಬಿ. ನಾಗೇಂದ್ರಚಾರಿ, ಬಿ. ಚಿದಾನಂದಪ್ಪ, ಎ. ಕೊಟ್ರೇಶ್, ಶ್ರೀಮತಿ ಉಮಾ ವಾಗೀಶ್, ವಿಶಾಲ್ ಕುಮಾರ್ ಆರ್. ಸಂಘವಿ, ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್, ಶ್ರೀಮತಿ ಅನೂಪ ಡಾ|| ವೀರೇಂದ್ರಸ್ವಾಮಿ, ವೃತ್ತಿಪರ ನಿರ್ದೇಶಕರಾದ ಆರ್.ವಿ. ಶಿರಸಾಲಿಮಠ, ಕಿರಣ್ ಶೆಟ್ಟಿ ಮತ್ತು ವ್ಯವಸ್ಥಾಪನಾ ಮಂಡಲಿಯ ಸದಸ್ಯರಾದ ಕೆ.ಎಂ. ಬಸವರಾಜ್, ಶ್ರೀಮತಿ ಜಿ.ಸಿ. ವಸುಂಧರ, ಮತ್ತು ಶ್ರೀಮತಿ ಶೈಲಾ ಹಾಲಸ್ವಾಮಿ ಕಂಬಳಿ ಹಾಗೂ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಎನ್. ತುಳಸಿನಾಥ್, ಉಪ ಪ್ರಧಾನ ವ್ಯವಸ್ಥಾಪಕರಾದ ಕೆ.ಎಂ. ರುದ್ರಮುನಿ, ಕೆ.ಎಂ. ನಟರಾಜ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಉಗ್ರ ಸಂಘಟನೆಯಿಂದ ಹಣ : ಕೇಜ್ರಿವಾಲ್ ವಿರುದ್ಧ ತನಿಖೆಗೆ ಶಿಫಾರಸ್ಸು



ನವದೆಹಲಿ, ಮೇ 6 – ನಿಷೇಧಿತ ಸಿಖ್ ಉಗ್ರವಾದಿ ಸಂಘಟನೆಯಿಂದ ಹಣ ಪಡೆಯ ಲಾಗಿದೆ ಎಂಬ ದೂರಿನ ಹಿನ್ನೆಲೆಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ ಎನ್.ಐ.ಎ. ಮೂಲಕ ತನಿಖೆ ನಡೆಸುವಂತೆ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಶಿಫಾರಸ್ಸು ಮಾಡಿದ್ದಾರೆ.

ನಿಷೇಧಿತ ಉಗ್ರವಾದಿ ಸಂಘಟನೆಯಾದ 'ಸಿಖ್ಸ್ ಫಾರ್ ಜಸ್ಟೀಸ್'ನಿಂದ ಆಮ್ ಆದ್ಮಿ ಪಾರ್ಟಿಯು ಹಣ ಪಡೆದಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿ ವಾಲ್ ವಿರುದ್ಧ ದೂರು ದಾಖಲಿ ಸಲಾಗಿತ್ತು. ಆರೋಪವನ್ನು ತಳ್ಳಿ ಹಾಕಿರುವ ಆಮ್ ಆದ್ಮಿ ಪಾರ್ಟಿ, ಇದು ಕೇಜ್ರಿವಾಲ್ ವಿರುದ್ಧ ನಡೆಸಲಾಗುತ್ತಿರುವ ಮತ್ತೊಂದು ಸಂಚು. ಲೆಫ್ಟಿನೆಂಟ್ ಗವರ್ನರ್ ಅವರು ಬಿಜೆಪಿ ಏಜೆಂಟರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಿದೆ.

ಕೇಂದ್ರ ಗೃಹ ಕಾರ್ಯದರ್ಶಿಗೆ ಪತ್ರ ಬರೆದಿರುವ ಸಕ್ಸೇನಾ, ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಾರ್ಟಿಯು 16 ದಶಲಕ್ಷ ಡಾಲರ್ ಹಣವನ್ನು ಉಗ್ರವಾದಿ ಸಂಘಟನೆಯಿಂದ ಪಡೆದಿರುವುದಾಗಿ ದೂರು ಬಂದಿದೆ ಎಂದು ಹೇಳಿದ್ದಾರೆ.

ಉಗ್ರವಾದಿ ದೇವೇಂದರ್ ಪಾಲ್ ಭುಲ್ಲರ್ ಬಿಡುಗಡೆಗೆ ವ್ಯವಸ್ಥೆ ಮಾಡಲು ಈ ಹಣ ನೀಡಲಾಗಿತ್ತು ಎಂದು ಆರೋಪಿಸಲಾಗಿದೆ. ಭುಲ್ಲರ್ ಈಗ ಅಮೃತ್‌ಸರ್ ಕೇಂದ್ರ ಬಂಧೀಖಾನೆಯಲ್ಲಿದ್ದಾನೆ. 1993ರಲ್ಲಿ ದೆಹಲಿಯಲ್ಲಿ ನಡೆಸಲಾದ ಬಾಂಬ್ ಸ್ಫೋಟದಲ್ಲಿ ಒಂಭತ್ತು ಜನ ಸಾವನ್ನಪ್ಪಿರುವ ಪ್ರಕರಣದಲ್ಲಿ ಸಿಲುಕಿ ಭುಲ್ಲರ್‌ಗೆ ಜೀವಾವಧಿ ಶಿಕ್ಷೆಯಾಗಿದೆ.

# ನಗರದಲ್ಲಿ ನಾಳೆ ವೈದ್ಯಕೀಯ ಶಿಬಿರ

ದಾವಣಗೆರೆ, ಮೇ 6 - ಬಸವ ಜಯಂತಿ ಪ್ರಯುಕ್ತ ವೈದ್ಯಕೀಯ ಶಿಬಿರವನ್ನು ಬಸವ ಬಳಗ ಹಾಗೂ ಎಸ್.ಎಸ್. ನಾರಾಯಣ ಹೃದಯಾಲಯ ಇವರ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 8ರ ಬುಧವಾರ ಬೆಳಿಗ್ಗೆ ಹಮ್ಮಿಕೊಳ್ಳಲಾಗಿದೆ. ಬುಧವಾರ ಬೆಳಿಗ್ಗೆ 9ರಿಂದ ನುರಿತ ವೈದ್ಯರಿಂದ ಬಿಪಿ, ಇಸಿಜಿ ಹಾಗೂ ಜನರಲ್ ಚೆಕಪ್ ಮಾಡಲಾಗುವುದು. ಹಳೆ ಕಾಯಿಲೆ ಇದ್ದವರು ಬೆಳಿಗ್ಗೆ ರಕ್ತ ಪರೀಕ್ಷೆಯಲ್ಲಿ ಮಧುಮೇಹ, ಕೊಲೆಸ್ಟ್ರಾಲ್ ಚೆಕಪ್ ಮಾಡಿಸಿಕೊಂಡು ರಿಪೋರ್ಟ್ ಜೊತೆಗೆ ಹಳೆಯ ದಾಖಲೆಗಳನ್ನು ತರಬೇಕು ತಿಳಿಸಿದ್ದಾರೆ.

ವಿವರಕ್ಕೆ ವೀಣಾ ಮಂಜುನಾಥ್ (9972084938), ಗುಂಡಪ್ಪ (9164855358) ಅವರನ್ನು ಸಂಪರ್ಕಿಸಬಹುದು.

ನೇರ ಸಂದರ್ಶನ

ದಾವಣಗೆರೆಯ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್‌ಗೆ ಸರ್ವೀಸ್ ಹಾಗೂ ಕ್ಲೀನ್ ಮಾಡಲು ಹುಡುಗರು ಮತ್ತು ಮಹಿಳೆಯರು ಪಾರ್ಟ್ ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಜೆ 6 ರಿಂದ ರಾತ್ರಿ 11 ರ ವರೆಗೆ. ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ.

94489 80070, 88847 04025

# ಹೊನ್ನೂರು : ನೀರಿನ ಸಂರಕ್ಷಣಾ ಮಾದರಿಯ ಧ್ಯೇಯ ಆಧಾರಿತ ಮತಗಟ್ಟೆ



ದಾವಣಗೆರೆ, ಮೇ 6 - ಜಿಲ್ಲಾ ಪಂಚಾಯತ ಸ್ವೀಪ್ ಸಮಿತಿ ಇವರ ನಿರ್ದೇಶನದನ್ವಯ ಹೊನ್ನೂರು ಗ್ರಾಮ ಪಂಚಾಯತಿ ವತಿಯಿಂದ ಹೊನ್ನೂರು ಗ್ರಾಮದ ಮತದಾನ ಕೇಂದ್ರದಲ್ಲಿ ನೀರಿನ ಸಂರಕ್ಷಣೆ ಅರಿವು ಮೂಡಿಸುವ ಹಾಗೂ ಮತದಾನ ಕೇಂದ್ರವನ್ನು ಮಾದರಿಯಾಗಿಸುವ ಹಿನ್ನಲೆಯಲ್ಲಿ ನೀರಿನ ಸಂರಕ್ಷಣಾ ಮಾದರಿಯ ದ್ಯೇಯ ಆಧಾರಿತ ಮತಗಟ್ಟೆ ಸ್ಥಾಪಿಸಲಾಗಿದೆ. ರಾಜ್ಯದಲ್ಲಿನ ಬರಗಾಲ ಇರುವ ಮತ್ತು ಕುಡಿಯುವ ನೀರಿನ ಅಪವ್ಯಯ ತಡೆಯುವ ಪರಿಸ್ಥಿತಿ ಒದಗಿದ ಹಿನ್ನಲೆಯಲ್ಲಿ ಮತದಾರರಲ್ಲಿ ಜಲ ಸಂರಕ್ಷಣೆ ಕುರಿತು ವೈಜ್ಞಾನಿಕ ವಿಧಾನಗಳನ್ನು ಸರಳವಾಗಿ ತಿಳಿಸಿ, ಆ ಮೂಲಕ ನೀರಿನ ಮಹತ್ವ ಹಾಗೂ ಸಂರಕ್ಷಣಾ ಕ್ರಮಗಳನ್ನು ಸಾರುವ ಮಾದರಿ ಪ್ರಾತ್ಯಕ್ಷಿಕೆ, ಗೋಡೆ ಬರಹ ಹಾಗೂ ಬ್ಯಾನರ್ ಗಳ ಮೂಲಕ ಬಿಂಬಿಸಲಾಗಿದೆ.

ಜೀವ ಜಲದ ಸಂರಕ್ಷಣೆ ಮೂಲಕ, ಸುಸ್ಥಿರ ಬಳಕೆಯ ವಿಧಿ ವಿಧಾನಗಳನ್ನೂ ಸಹ ಬಿಂಬಿಸಲಾಗಿದೆ. 1847 ಮತದಾರರನ್ನು ಜಾಗೃತರನ್ನಾಗಿಸುವ ಮಾಹಿತಿ ಸಂವಹನದ ಉಪಕ್ರಮ ಇದಾಗಿದೆ. ಈ ಮೂಲಕ ಗ್ರಾಮ ಪಂಚಾಯತಿ ಹೊನ್ನೂರು, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮತ್ತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರ ಮಾರ್ಗದರ್ಶನದಲ್ಲಿ ಧ್ಯೇಯ ಆಧಾರಿತ ಮತಗಟ್ಟೆಯನ್ನು ಮಾದರಿಯಾಗಿಸಿದೆ.

# ಮತದಾರರನ್ನು ಆಕರ್ಷಿಸುತ್ತಿರುವ ಎಲೆಬೇತೂರಿನ 'ಪಿಂಕ್ ಸಖಿ ಬೂತ್'



ದಾವಣಗೆರೆ, ಮೇ 6 - ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಲೆಬೇತೂರು ಗ್ರಾಮದಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆ-2024 ಅಂಗವಾಗಿ ಮತದಾನ ಜಾಗೃತಿಯೊಂದಿಗೆ ಮಹಿಳಾ ಮತ ದಾರರನ್ನು ಆಕರ್ಷಿಸಲು ಮತ್ತು ಮತ ದಾನದ ಶೇಕಡಾವಾರು ಪ್ರಮಾಣ ಹೆಚ್ಚಾಗಿಸಲು 'ಪಿಂಕ್ ಸಖಿ ಬೂತ್' ನ ವ್ಯವಸ್ಥೆಯನ್ನು ಮಾಡಲಾಗಿದೆ. ಇದೇ ಗ್ರಾಮ ಪಂಚಾಯ್ತಿಗೆ ಸೇರುವ ಬಿ.ಕಲಪನಹಳ್ಳಿ ಹಾಗೂ ಬಿ. ಚಿತ್ತಾನಹಳ್ಳಿಯಲ್ಲೂ ಮತದಾನಕ್ಕಾಗಿ ಉತ್ತಮ ಮತಗಟ್ಟೆಯನ್ನು ವ್ಯವಸ್ಥೆ ಮಾಡಲಾಗಿದೆ.

**ಜಿಲ್ಲಾಧಿಕಾರಿಗಳ ಭೇಟಿ, ಪ್ರಶಂಸೆ**

'ನಮ್ಮ ಮತ - ನಮ್ಮ ಹಕ್ಕು, ನನ್ನ ಮತ - ನನ್ನ ಧ್ವನಿ, ನಮ್ಮ ನಡೆ ಮತಗಟ್ಟೆಯ ಕಡೆ' ಎಂಬ ಘೋಷಣೆಗಳೊಂದಿಗಿರುವ 'ಪಿಂಕ್ ಸಖಿ ಬೂತ್' ಮತದಾರರನ್ನು ಆಕರ್ಷಿಸುವಂತೆ ಮಾಡಿದೆ. ಇಂದು ಸಂಜೆ ಗ್ರಾಮಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಅರಮನೆಯ ರೀತಿಯಲ್ಲಿ ಸಜ್ಜುಗೊಂಡಿರುವ 'ಪಿಂಕ್ ಸಖಿ ಬೂತ್' ಮತಗಟ್ಟೆಯನ್ನು ವೀಕ್ಷಿಸಿ ಹಾಗೂ ಚಿಕ್ಕ ಚಿಕ್ಕ ಮಡಿಕೆಗಳ ಮೇಲೆ ಲೋಕಸಭಾ ಚುನಾವಣೆ ಮೇ 7, 2024 ಎಂದು ಬರೆದಿರುವುದನ್ನು ಗಮನಿಸಿ ಮತ್ತು ಪಕ್ಕದಲ್ಲಿದ್ದ ಕುಡಿಯುವ ನೀರಿನ ಮಡಿಕೆಯಲ್ಲಿದ್ದ ನೀರನ್ನು ಕುಡಿದು ವ್ಯವಸ್ಥೆ ಬಗ್ಗೆ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಕಾರ್ಯವನ್ನು ಪ್ರಶಂಸಿಸಿದರು.

# ಗಾಂಧಿನಗರದಲ್ಲಿ ನಾಳೆಯಿಂದ ಜಾತ್ರೆ



ದಾವಣಗೆರೆ, ಮೇ 6 - ಇಲ್ಲಿನ ಗಾಂಧಿ ನಗರದಲ್ಲಿ ನಾಡಿದ್ದು ದಿನಾಂಕ 8ರಿಂದ 10ರ ವರೆಗೆ ಶ್ರೀ ಹುಲಿಗೆಮ್ಮ ದೇವಿಯ ಜಾತ್ರಾ ಮಹೋತ್ಸವ ನಡೆಯಲಿದೆ. 8ರ ಬೆಳಗ್ಗೆ 6ಕ್ಕೆ ಹರಿಹರದ ತುಂಗಭದ್ರಾ ನದಿಗೆ ದೇವಿಯು ಹೊಳೆ ಪೂಜೆಗೆ ಹೋಗಲಿದ್ದು, ಅಂದು ಸಂಜೆ 6ಕ್ಕೆ ದೇವಿಯ ಮೆರವಣಿಗೆ ನಡೆಯಲಿದೆ. ಇದೇ ದಿನಾಂಕ 9ರಂದು ರಾತ್ರಿ 10ಕ್ಕೆ ಭಜನೆ ಮತ್ತು ದಿನಾಂಕ 10ರ ಬೆಳಗ್ಗೆ 6ಕ್ಕೆ ದೇವಿಯ ಅಗ್ನಿಕುಂಡ ಜರುಗಿದ ನಂತರ ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಸೇವಾ ಸಮಿತಿ ತಿಳಿಸಿದೆ.

## ಶಿರಮಗೊಂಡನಹಳ್ಳಿ ಗ್ರಾಮದ ಕರಿಯಪ್ಪರ ಶ್ರೀ ವಾಮದೇವಪ್ಪ ನಿಧನ



ದಾವಣಗೆರೆ ತಾ।।, ಜಿ।। ಶಿರಮಗೊಂಡನಹಳ್ಳಿ ಗ್ರಾಮದ ವಾಸಿಯಾದ

**ಕರಿಯಪ್ಪರ ಶ್ರೀ ವಾಮದೇವಪ್ಪನವರು**

ದಿನಾಂಕ : 6.5.2024ರ ಸೋಮವಾರ ಬೆಳಿಗ್ಗೆ 11.45ಕ್ಕೆ ನಿಧನರಾದರು. ಅವರಿಗೆ ಸುಮಾರು 78 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 7.5.2024ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಾಗನೂರು (ಮೇನ್ ಚಾನಲ್) ಗ್ರಾಮದ ಪುತ್ರಿಯ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ ಹಾಗೂ ಕರಿಯಪ್ಪರ ವಂಶಸ್ಥರು
ಶಿರಮಗೊಂಡನಹಳ್ಳಿ. ಫೋನ್ : 88803 40838, 88618 83285

# ಕಾಯಿಪೇಟೆಯಲ್ಲಿ 10ರಂದು ಬಸವ ಜಯಂತ್ಯೋತ್ಸವ



ದಾವಣಗೆರೆ, ಮೇ 6-ನಗರದ ಕಾಯಿಪೇಟೆ ಶ್ರೀ ಬಸವೇಶ್ವರ ನಗರದಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಇದೇ ದಿನಾಂಕ 10ರ ಶುಕ್ರವಾರ ಶ್ರೀ ಬಸವೇಶ್ವರ ಜಯಂತ್ಯೋತ್ಸವ ನಡೆಯಲಿದೆ.

ಅಂದು ಬೆಳಿಗ್ಗೆ 7 ರಿಂದ 9ರ ವರೆಗೆ ತೊಟ್ಟಿಲು ಪೂಜೆ, ಸಂಜೆ 5 ಗಂಟೆಗೆ ವಿದ್ಯುತ್ ಅಲಂಕೃತ ವಾದ ಭವ್ಯವಾದ ಹೂವಿನ ಮಂಟಪದಲ್ಲಿ ಶ್ರೀ ಬಸವೇಶ್ವರ ಮೂರ್ತಿಯ ಮೆರವಣಿಗೆ ರಾಜಬೀದಿಗಳಲ್ಲಿ ಜರುಗಲಿದೆ.

ದಿನಾಂಕ 11ರ ಶನಿವಾರವಾರ ಸರ್ವ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.




# ಮತದಾನ ಮಾಡಿದವರಿಗೆ ಉಚಿತ ತಪಾಸಣೆ

ದಾವಣಗೆರೆ, ಮೇ 6 - ನಗರದ ಡಾ.ಎ.ಎಂ. ಶಿವಕುಮಾರ್ ಅವರ ಕಿವಿ, ಮೂಗು ಮತ್ತು ಗಂಟಲು ಆಸ್ಪತ್ರೆಯಲ್ಲಿ ನಾಡಿದ್ದು ದಿನಾಂಕ 8ರಿಂದ 11ರ ವರೆಗೆ ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸಿದವರಿಗೆ ಬೆಳಗ್ಗೆ 11ರಿಂದ ಮಧ್ಯಾಹ್ನ 3ರ ವರೆಗೆ ಉಚಿತ ತಪಾಸಣೆ ನಡೆಯಲಿದೆ.







KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas